

ಪುಣೆಯ ಏಕೈಕ ಕನ್ನಡ ಮಾಸಪತ್ರಿಕೆ

# ಕಂಪು

August 2024

ಸಂಚಿಕೆ ವಿಶೇಷ

## ಸ್ವಾತಂತ್ರ್ಯದೆಡೆಗೆ, ಕನ್ನಡಿಗರ ಕೊಡುಗೆ

# ಒಳಗೇನಿದೆ ?



ಕಂಪು – ಸಂಚಿಕೆ 4: ಆಗಸ್ಟ್ 2024

ಸಂಪಾದಕರ ಲೇಖನಿಯಿಂದ 2

ಅನಿಸಿಕೆಯ ಅಂಗಳ 3

ವಿಶೇಷ ಲೇಖನ
ಸ್ವಾತಂತ್ರ್ಯದೆಡೆಗೆ, ಕನ್ನಡಿಗರ ಕೊಡುಗೆ 4

ನಮ್ಮಲ್ಲಿನ ಸುದ್ದಿ
ಕನ್ನಡ ಸಾಹಿತ್ಯ ಸಂಭ್ರಮ, ಕವಿಗೋಷ್ಠಿ 7
ನಮ್ಮವರ ಆರೋಗ್ಯ ಶಿಬಿರ 13
ಕನ್ನಡ ಶಾಲೆಯ ವಜ್ರಮಹೋತ್ಸವ 15
ಗುರುಪೂರ್ಣಿಮೆಯ ಕಾರ್ಯಕ್ರಮ 18

ಕಾವ್ಯ ಮಲ್ಲಿಗೆ
ನಿನಗಾಗಿ 12
ನನ್ನ ಭಾರತ 14
ವ್ಯಾಪಾರ ಮಳಿಗೆ 20

ಹನಿಗವನ 9

ತಿಂಗಳ ವ್ಯಕ್ತಿ
ಶ್ರೀ ಚಂದ್ರಕಾಂತ ಹಾರಕೂಡೆ 10

ಚೆಂದದ ಚಿತ್ತಾರ 17

ಮೊಗ್ಗೆಯ ಕಂಪು
ಸುರಭಿ ಅಣ್ಣಿಗೇರಿ 19

ಮುಂದಿನ ಸಂಚಿಕೆಯಲ್ಲಿ 21

ವಿನ್ಯಾಸಗಾರ, ಪ್ರಕಾಶಕ
ಹಾಗು
ಸಂಪಾದಕ:

ಮನೋಜಕುಮಾರ ಅಣ್ಣಿಗೇರಿ

e mail:

editor@kampu.org



# ಸಂಪಾದಕರ ಲೇಖನಿಯಿಂದ............

ಪ್ರಿಯ ಕನ್ನಡಿಗರೇ,

ಬೇಸಿಗೆಯ  ಬಿಸಿಲಿನಲ್ಲಿ ಅರಳಿದ ಕಂಪು, ಈಗ ಆಷಾಢ ಮಳೆಯಲ್ಲೂ ತನ್ನ ಸುವಾಸನೆ ಬೀರುತ್ತ ನಾಲ್ಕನೆಯ ಸಂಚಿಕೆ ತರುತ್ತಿರುವದು ಮತ್ತು ಶುದ್ಧ ಸಾಹಿತ್ಯವನ್ನು ಕೊಡುತ್ತ ಬಂದಿರುವದು ಅಭಿಮಾನದ ಸಂಗತಿ. ನಿಮ್ಮ ಮೆಚ್ಚುಗೆ-ಪ್ರೀತಿ ಹೀಗೆಯೇ ಮುಂದುವರೆಯಲಿ.

ಈ ನಾಲ್ಕು ತಿಂಗಳ ಅವಧಿಯಲ್ಲಿ ಅನೇಕ ಕನ್ನಡಿಗರು ಲೇಖನ, ಕವನ, ವಿನ್ಯಾಸ, ಮತ್ತಿತರ ಕೃತಿಗಳಿಂದ ಕಂಪನ್ನು ಸಮೃದ್ಧಗೊಳಿಸಿರುವದು ನಮ್ಮ ಭಾಗ್ಯ. ಶ್ರೀ ಬಸವರಾಜ ಪಟ್ಟಣಶೆಟ್ಟಿ ಮತ್ತು ಶ್ರೀಮತಿ ಹೇಮಾ ಮಳಗಿಯವರು ಮೊದಲಿನಿಂದಲೂ ಪುಣೆ ವಾರ್ತೆಗಳ ಲೇಖನ ನೀಡುತ್ತಾ ಬಂದಿದ್ದಾರೆ. ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಅನೇಕ ಕನ್ನಡಿಗರು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಜೀವನ ಹಾಗು ಕುಟುಂಬದ ಭವಿಷ್ಯವನ್ನೇ ಸಮರ್ಪಿಸಿದರೂ ಇತಿಹಾಸದ ಪುಟಗಳಿಂದ ದೂರವಾಗಿ ಉಳಿದು ಹೋಗಿದ್ದು ದುರದೃಷ್ಟಕರ. ಸ್ವಾತಂತ್ರ್ಯೋತ್ಸವದ ಈ ತಿಂಗಳಲ್ಲಿ ಈ ರಾಷ್ಟ್ರಾಭಿಮಾನಿ ವೀರರನ್ನು ನೆನಪಿಸಿಕೊಳ್ಳೋಣ. ಅವರ ವೀರಗಾಥೆಗಳನ್ನು ಮುಂದಿನ ಪೀಳಿಗೆಗೂ ತಲುಪಿಸೋಣ. ಈ ಕಾರ್ಯದಲ್ಲಿ ಸಂಶೋಧನೆಯಿಂದ ಹಿಡಿದು ವಿನ್ಯಾಸದವರೆಗೆ ಉತ್ಸಾಹದಿಂದ ಸಹಾಯ ಮಾಡಿದ ಶ್ರೀಮತಿ ರಶ್ಮಿ ಕುಲಕರ್ಣಿಯವರಿಗೆ ಧನ್ಯವಾದಗಳು. ಇಂತಹ ಅನೇಕ ಕೈಗಳು ನೀರುಗೈದಾಗಲೇ ನೆಟ್ಟ ಈ ಸಸಿ ಹೆಮ್ಮರವಾಗಿ ಬೆಳೆಯುವದು.

ಪುಣೆಯ ಮಕ್ಕಳಿಂದ ಕಲಾಕೃತಿಗಳು ಬರತಾ ಇಲ್ಲ. ಪುಣೆಕರ ತಂದೆ ತಾಯಿಂದಿರಿಗೆ ಮಕ್ಕಳನ್ನು ಈ ದಿಶೆಯಲ್ಲಿ ಪ್ರೋತ್ಸಾಹಿಸಲು ಆಗ್ರಹದ ವಿನಂತಿ.

ಜುಲೈನಲ್ಲಿ ಪುಣೆ ಕನ್ನಡ ಬಳಗ ಅನೇಕ ಕಾರ್ಯಕ್ರಮಗಳನ್ನು ಸಂಭ್ರಮದಿಂದ ಆಚರಿಸಿತು. ಹೀಗೆಯೇ ಸಾಹಿತ್ಯ ಸಂಸ್ಕೃತಿಗಳ ಉತ್ಸವ ಸಾಗುತ್ತಾ ಇರಲಿ. ಪುಣೆಯಲ್ಲಿ ಕನ್ನಡ ಶಾಲೆ ಪ್ರಾರಂಭವಾಗಿ 60 ವರ್ಷಗಳಾಗಿದ್ದು ಹೆಮ್ಮೆ ಪಡುವಂತಹದು. ಈ ಶಾಲೆಯ ಆಡಳಿತಗಾರರು ಹಾಗು ಎಲ್ಲಾ ಶಿಕ್ಷಕ ಶಿಕ್ಷಕಿಯರಿಗೆ ಶಿರಬಾಗಿ ವಂದನೆಗಳು.

ಪುಣೆ ಮತ್ತು ಕರ್ನಾಟಕದ ಕೆಲ ಭಾಗಗಳಲ್ಲಾದ ಮಳೆರಾಯನ ಅಬ್ಬರದಿಂದ ತಾವೆಲ್ಲಾ ಸುರಕ್ಷಿತ ಕ್ಷೇಮವಾಗಿರುವಿರೆಂದು ಆಶಿಸುವೆ. ವರುಣ ಶಾಂತವಾಗಿ ಹೊಲಗಳಿಗೆ ನೀರುಣಿಸಿ ಪಚ್ಚನೆ ಪೈರು ಬೆಳೆಸಲಿ. ಇನ್ನೂ

ಕೆಲ ದಿನಗಳಲ್ಲಿ ಹಬ್ಬಗಳ ಸಾಲೇ ಬರುತ್ತಿದೆ. ಸಿಹಿಯೂಟದೊಂದಿಗೆ ನಮ್ಮ ಪತ್ರಿಕೆಯಲ್ಲಿನ ಕವನ-ಲೇಖನಗಳನ್ನೂ ಆಸ್ವಾದಿಸಿ. ತಮ್ಮ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ನಮಗೆ ಬರೆದು ತಿಳಿಸಿ. ಈ ಸಂಚಿಕೆಯನ್ನೂ ತಮ್ಮದಾಗಿಸಿಕೊಳ್ಳಿ, ಎಲ್ಲೆಲ್ಲೂ ಕಂಪು ಹರಡಿ.

ಧನ್ಯವಾದಗಳೊಂದಿಗೆ,

ನಿಮ್ಮಲ್ಲಿಯ ಕನ್ನಡಿಗ,

ಮನೋಜಕುಮಾರ ಅಣ್ಣಿಗೇರಿ

### ಭಾಷಾ ಪ್ರೇಮ, ಸಾಹಿತ್ಯ, ತಂತ್ರಜ್ಞಾನಗಳ ಸಂಗಮ

ಕಳೆದ ಸಂಚಿಕೆಯನ್ನ ನೋಡಿದ್ದೀನಿ. ಅತ್ಯಂತ ಸುಂದರವಾಗಿ ವಿನ್ಯಾಸ ಮಾಡಿದ್ದೀರಿ.
ಭಾಷಾ ಪ್ರೇಮ, ಸಾಹಿತ್ಯದ ಒಲವು ಮತ್ತು ನವ ನವೀನ ತಂತ್ರಜ್ಞಾನಗಳ ಅದ್ಭುತ ಸಂಗಮವಾಗಿದೆ ನಿಮ್ಮ ಕಂಪು.
ನಿಮ್ಮೀ ಪತ್ರಿಕೆ ದೇಶದ ಎಲ್ಲೆಡೆಯಲ್ಲೂ ಕಂಪನು ಪಸರಿಸುತ್ತ ಜನಮನಗಳಿಗೆ ತಂಪನು ನೀಡಲೆಂದು ನನ್ನ ಮನದಾಳದಿಂದ ಶುಭ ಹಾರೈಸುವೆ.

**ಮಧು ವಸ್ತ್ರದ್**

ಪು ಟ ಪು ಟಗಳಲ್ಲಿ ಪರಿಮಳ
*ಕಂಪು* ಕನ್ನಡದ ಕಂಪನ್ನು ಎಲ್ಲೆಡೆ ಪಸರಿಸಿದ. ಎಲ್ಲಕ್ಕಿಂತ ಮೊದಲು ಕಂಪು ಪತ್ರಿಕೆ ಪ್ರಕಟಣೆಗೆ ಮುಂದಾಗಿ, ಶ್ರಮಿಸಿದ ಎಲ್ಲ ಕನ್ನಡದ ಹೂ ಮನಸುಗಳಿಗೆ ಹಾರ್ದಿಕ ಅಭಿಮಾನದ ಅಭಿನಂದನೆಗಳು. ಪುಟ್ಟ ಪತ್ರಿಕೆಯ ಪುಟ ಪುಟಗಳಲ್ಲಿ ಕಥೆ, ಕವನ ದವನದ ಪರಿಮಳ. ಪುಣೆ ನಗರದಲ್ಲಿರುವ ಎಣೆಯಿಲ್ಲದ ಕನ್ನಡ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿ ಎಳೆ ಚಿಗುರುಗಳಿಗೆ ನೀರೆರೆದು ಬೆಳೆಸುವ ಕೆಲಸವನ್ನು ಕಂಪು ಮಾಡುತ್ತಿರುವುದು ಬಹಳ ಸಂತೋಷದ ಸಂಗತಿಯಾಗಿದೆ. ಸೊಂಪಾಗಿ ಬೆಳೆದು ಹೂ, ಕಾಯಿ, ಹಣ್ಣುಗಳಿಂದ ಕಂಗೊಳಿಸುತ್ತ ಎಲ್ಲರ ಮನ ತಣಿಸಲಿ. ಕನ್ನಡ ಸಾಹಿತ್ಯದ ಕಂಪನ್ನು *ಕಂಪು* ಪಸರಿಸುತ್ತ ಹೃನ್ಮನ ತಂಪಾಗಿಸಲಿ. ಮುಂಬರುವ ದಿನಗಳಲ್ಲಿ ಇನ್ನೂ ಉತ್ತರೋತ್ತರ ಪ್ರಗತಿಯಾಗಿ, ಕಂಪು ಕನ್ನಡದ ಇಂಪಿನ ಕೂಜನ ಎಲ್ಲೆಡೆ ಧ್ವನಿಸಲಿ ಎಂಬ ಶುಭ ಹಾರೈಕೆಗಳೊಂದಿಗೆ..... ಶುಭಾಶಯಗಳು.

**ಇಂದಿರಾ ಮೋಟೆಬೆನ್ನೂರ**

### ಪ್ರತಿಕ್ರಿಯೆಯ ಕವನ

ಕಂಪಿನ ಸಂಚಿಕೆಯ ಸಿರಿಗಂಧ ಹರಡಿದೆ
ಮಕ್ಕಳ ಮುಖಪುಟದ ಸುಂದರ ವಿನ್ಯಾಸವಿದೆ
ಕುತೂಹಲ ಮೂಡಿಸುವ ಸಾಹಿತ್ಯ *ಒಳಗೇನಿದೆ*
ಸಂಪಾದಕ ಮನೋಜರ ಉತ್ಸಾಹಿತ
ದೂರದೃಷ್ಟಿಯಿದೆ

ಕಾವ್ಯ ಸಂಪತ್ತಿನ ಉತ್ಕೃಷ್ಟ ಗುಣಗಾನವಿದೆ
ಮಕ್ಕಳ ಕಲೆಯ ಪ್ರೋತ್ಸಾಹಿಸುವ ಕರೆಯಿದೆ
*ಸೊಂಪಾದ ಕಥೆಯ* ಕಟ್ಟುವ ಮನಸಿದೆ
ಹಾಡು ವಾಚನ ನೃತ್ಯದ *YouTube* ಬೆಳಗಿದೆ

ಅನಿಸಿಕೆಯ ಅಂಗಳ ತೆರೆದ ಪುಸ್ತಕದಂತಿದೆ
ಕುಂದನರ ನಗೆಗಡಲು ಎಲ್ಲ ಪುಟದಲ್ಲಿದೆ
*ಕನ್ನಡದ ಕಂಪು* ಗೆದ್ದಮನಗಳ ರಾಗವಾಗಿದೆ
ಆರು ಅನಿಸಿಕೆಗಳಲಿ ಮಲ್ಲಿಗೆಯ ಘಮವಿದೆ

ವಿವಿಧೆಡೆ ಬಸವ ಜಯಂತಿಯ ಆಚರಣೆಯಿದೆ
ಚಿಣ್ಣರ ಚೆಂದದ ಚಿತ್ತಾರದ ಕುಂಚದ
ಕಳೆ(ಕಲೆ)ಯಿದೆ
ಕಾವ್ಯಮಲ್ಲಿಗೆ ಶರಣ ಪ್ರಶಾಂತರ ಕವಿತೆಯ
ಓದಿಸಿದೆ
ಕರಾಳ ದಿನಗಳ ಮುಕ್ತ ಕನ್ನಡಿಗರ ನಮನವಿದೆ

ಅಚ್ಯುತರ ಚಿತ್ರಕವನದ ಸುಂದರ
ಭಾವದಂಗಳವಿದೆ
ಜ್ಯೋತಿ ಮೇಡಂ ತಿಂಗಳ ವ್ಯಕ್ತಿಯ ಪರಿಚಯವಿದೆ
ಅನುಸೂಯ ಮೇಡಂರ ಮನಮಿಡಿಯುವ
ಕಥೆಯಿದೆ
ಸಂಸ್ಕೃತಿಯ ಮೊಗ್ಗಿನ ಪ್ರತಿಭೆಯ
ಅನಾವರಣವಿದೆ

ಸೆರೆಹಿಡಿದ ವಿವಿಧ ವಿಷಯಗಳ
ಛಾಯಾಫಲಕವಿದೆ
ಎರಡನೇ ಸಂಚಿಕೆಯು ಸುಂದರ ಮೆರುಗು
ನೀಡಿದೆ
ಮುಂದಿನ ಸಂಚಿಕೆಗೆ ದಾರಿಯ ಮಾಡಿದೆ.

**ಶ್ರೀಪಾದ ಆಲಗೂಡಕರ**

# ಸ್ವಾತಂತ್ರ್ಯದೆಡೆಗೆ, ಕನ್ನಡಿಗರ ಕೊಡುಗೆ



ಭಾರತದ ಸ್ವಾತಂತ್ರ್ಯಕ್ಕಾಗಿ ಅನೇಕ ಕನ್ನಡಿಗರು ತಮ್ಮ ಸಂಪೂರ್ಣ ಜೀವನವನ್ನೇ ಮುಡಿಪಾಗಿಟ್ಟರು. ಆದರೆ ಅವರ ತ್ಯಾಗ, ಬಲಿದಾನಗಳು ನಮ್ಮ ಇತಿಹಾಸದ ಪುಟಗಳಿಂದ ಅಳಿಸಿ ಹೋದವು. ಯಾವುದೇ ಲಾಭಾಪೇಕ್ಷೆ ಇಲ್ಲದೆ ತಮ್ಮನ್ನೇ ಸಮರ್ಪಿಸಿದ ಈ ಸ್ವಾತಂತ್ರ್ಯವೀರರನ್ನು ಇಂದು ನೆನೆಸೋಣ. ತೆರೆಮರೆಯಲ್ಲಿ ಉಳಿದ ನಾಯಕರ ಬಗ್ಗೆ ನಮ್ಮ ಮುಂದಿನ ಪೀಳಿಗೆಗೂ ಹೇಳೋಣ. ಇಂತಹ ಕೆಲ ಹೋರಾಟಗಾರರ ಬಗ್ಗೆ ಕಿರು ಮಾಹಿತಿಯೇ ಸ್ವಾತಂತ್ರ್ಯ ಮಾಸದಲ್ಲಿ ನಾವು ಅವರಿಗೆ ಅರ್ಪಿಸುವ ಶ್ರದ್ಧಾಂಜಲಿ.

## ಟಿ.ಆರ್ ಶಾಮಣ್ಣ (1912-1986)




ತಿಪ್ಪುರಂಗನಾಥ ರಾಮರಾಯ ಶಾಮಣ್ಣ ಇವರು ಕರ್ನಾಟಕದ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಮಾಜಸೇವಕ. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸಿ ಬ್ರಿಟೀಷರಿಂದ ಬಂಧನಕ್ಕೊಳಗಾಗಿದ್ದರು. ಸ್ವಾತಂತ್ರ್ಯದ ನಂತರ" ಸ್ವಾಭಿಮಾನ" ಎಂಬ ಸಂಘಟನೆಯ ಮೂಲಕ ಬಡ ಮಕ್ಕಳಿಗೆ ಶಿಕ್ಷಣ, ಆರೋಗ್ಯ ಸೇವೆಗಳನ್ನು ಒದಗಿಸಿದರು. ಬಡವರ ಹಾಗೂ ಹಿಂದುಳಿದ ವರ್ಗದವರ ಹಿತಕ್ಕಾಗಿ ದುಡಿದವರಲ್ಲಿ ಇವರ ಹೆಸರು ಅಚ್ಚಳಿಯದಂತೆ ಉಳಿದಿದೆ.

## ಭಾವುರಾವ್ ದೇಶಪಾಂಡೆ (1978-1984)



ಚಿಕ್ಕ ವಯಸ್ಸಿನಿಂದಲೇ ರಾಷ್ಟ್ರಾಭಿಮಾನ ತುಂಬಿದ ಭಾವುರಾವ್ ದೇಶಪಾಂಡೆ, ಸ್ವಾತಂತ್ರ ಹೋರಾಟಗಾರ,ಆರ್ ಎಸ್ ಎಸ್ ನಾಯಕ, ಸಮಾಜ ಸುಧಾರಕ ಮತ್ತು ಅನೇಕ ಯುವ ಕ್ರಿಯಾಶೀಲ ನಾಯಕರಿಗೆ ಮಾರ್ಗದರ್ಶನ ನೀಡಿದವರು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಇವರನ್ನು ಬಂಧಿಸಲಾಗಿತ್ತು. ರಾಷ್ಟ್ರೀಯ ಚಿಂತನೆಯನ್ನು ಅನೇಕ ಯುವಕರಿಗೆ ಮನದಟ್ಟು ಮಾಡಿಸಿದ ಇವರು ಹಿಂದುಳಿದ ವರ್ಗದವರ ಸಶಕ್ತೀಕರಣ ಹಾಗೂ ಸಾಮಾಜಿಕ ನ್ಯಾಯವನ್ನು ಪ್ರೋತ್ಸಾಹಿಸಲು ನಿರಂತರ ಶ್ರಮಿಸಿದವರು.

## ಹೂ.ವೆ. ಶೇಷಾದ್ರಿ (1926-2005)



ಕಾನೂನಿನ ಪದವೀಧರರಾಗಿದ್ದ ಶೇಷಾದ್ರಿ ಅವರು ಸ್ವಾತಂತ್ರ್ಯ ಹೋರಾಟಗಾರ ಹಾಗೂ ಜೀವನವನ್ನು ರಾಷ್ಟ್ರ ಮತ್ತು ಸಂಘದ ಕಾರ್ಯಕ್ಕಾಗಿ ಸಮರ್ಪಿಸಿದವರು . ಭಾರತೀಯ ಸಂಸ್ಕೃತಿಯನ್ನು ಉತ್ತೇಜಿಸಲು ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟವರು. ಇವರು ತಮ್ಮ ಪ್ರಭಾವಿ ಬರವಣಿಗೆಯಿಂದ, ಭಾರತದ ಸಂಸ್ಕೃತಿ, ಇತಿಹಾಸ ಹಾಗೂ ಸಂಘದ ಕಾರ್ಯ ಪದ್ಧತಿಗಳನ್ನು ಪುಸ್ತಕಗಳ ರೂಪದಲ್ಲಿ ಹೊರತಂದಿದ್ದಾರೆ. ಉತ್ಥಾನ ಮಾಸಿಕ, ವಿಕ್ರಮ ವಾರಪತ್ರಿಕೆ, ಭುಗಿಲು(ವಿಭಜನೆಯ ದುರಂತ ಕಥೆ) ಇವೆಲ್ಲ ಅವರ ಜನಪ್ರಿಯ ಬರಹಗಳು.

## ಜಗನ್ನಾಥ್ ರಾವ್ ಜೋಶಿ (1920-1991)



ಉತ್ತರ ಕರ್ನಾಟಕದವರಾದ ಜಗನ್ನಾಥ ಜೋಶಿ ಅವರು ಸ್ವಾತಂತ್ರ ಚಳುವಳಿಯಲ್ಲಿನ ಪ್ರಮುಖ ಪಾತ್ರ ವಹಿಸಿದರು. ದೇಶ ಸೇವೆ ಹಾಗೂ ರಾಜಕೀಯ ಜೀವನದ ಸಾಧನೆಗಳ ಮೂಲಕ ಮಹಾನ್ ನಾಯಕರಾಗಿ ಚಿರಪರಿಚಿತವಾಗಿದ್ದಾರೆ. ಜಗನ್ನಾಥ್ ಜೋಶಿಯವರ ತಾತ್ವಿಕ ದೃಷ್ಟಿಕೋನ, ನೀತಿ - ನ್ಯಾಯದ ಮೇಲಿಂದ ಜನಮನ್ನಣೆ ಪಡೆದಿದ್ದಾರೆ. ರಾಜಕೀಯ ಸ್ವಚ್ಛತೆ ಹಾಗೂ ದೇಶ ಸೇವೆ ಅವರ ಮುಖ್ಯ ತತ್ವವಾಗಿತ್ತು. ಸ್ವಾತಂತ್ರ್ಯದ ನಂತರ ಭಾರತೀಯ ಜನ ಸಂಘದ ಮೂಲಕ ಅವರು ರಾಜಕೀಯ ಕ್ಷೇತ್ರದಿಂದ ರಾಷ್ಟ್ರ ಸೇವೆಗೈದರು.

## ಮೈಲಾರ ಮಹಾದೇವಪ್ಪ (1911-1943)



ಮೈಲಾರ ಮಹಾದೇವಪ್ಪನವರು ಬ್ರಿಟೀಷರ ಆಳ್ವಿಕೆಯನ್ನ ತೀವ್ರವಾಗಿ ವಿರೋಧಿಸಿದ ಮಹಾನ್ ದೇಶಭಕ್ತ. ಇವರು ಗಾಂಧೀಜಿ ಕರೆ ನೀಡಿದ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ತಮ್ಮ ಸಾಹಸವನ್ನು ಪ್ರದರ್ಶಿಸಿದ್ದರು. 18ನೇ ವಯಸ್ಸಿನಲ್ಲಿಯೇ ಗಾಂಧೀಜಿಯವರ ದಾಂಡಿ ಮೆರವಣಿಗೆಯಲ್ಲಿ ಕರ್ನಾಟಕದ ಏಕೈಕ ಪ್ರತಿನಿಧಿಯಾಗಿ ಜೊತೆ ನೀಡಿದ್ದರು. ಬಲವಂತದಿಂದ ಸಂಗ್ರಹಿಸಿದ ಭೂಕಂದಾಯ ಹಣವನ್ನು ರೈತರಿಗೆ ಹಿಂತಿರುಗಿಸಿ ಶ್ಲಾಘನೆಗೆಪಾತ್ರರಾಗಿದ್ದರು. 1943ರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಖಜಾನೆಯನ್ನು ಒಡೆಯುವಾಗ ಇವರು ಪೊಲೀಸರಿಂದ ಹತ್ಯೆಗೀಡಾದರು..

## ಗುದ್ಲೆಪ್ಪ ಹಳ್ಳಿಕೇರಿ (1906-1972)



ಅಪ್ಪಟ ಗಾಂಧೀವಾದಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಗುದ್ಲೆಪ್ಪ ಹಳ್ಳಿಕೇರಿಯವರು ಅನೇಕ ಪ್ರಭಾವಿ ನಾಯಕರೊಡನೆ ಅಹಿಂಸಾ ಹಾಗೂ ಶಾಂತಿ ಪ್ರತಿಭಟನೆಯ ಮುಂಚೂಣಿ ವಹಿಸಿದ್ದರು. ಬಹಳಷ್ಟು ಸಮಾಜಮುಖಿ ಕೆಲಸಗಳನ್ನು ಮಾಡಿದ ಅವರು ಮುಂದೆ ಕರ್ನಾಟಕದ ಏಕೀಕರಣಕ್ಕಾಗಿ ಬಹಳ ಸಕ್ರಿಯವಾಗಿ ದುಡಿದರು.

## ಅಂಬಾಬಾಯಿ (1889-1971)




ಮೈಸೂರಿನ ಅಂಬಾಬಾಯಿಯವರು ಸಾಂಪ್ರದಾಯಕ ಕುಟುಂಬದಲ್ಲಿ ಜನಿಸಿದವರು. ಕೇವಲ ಹದಿನಾರನೇ ವಯಸ್ಸಿನಲ್ಲಿ ವಿಧವೆಯಾದ ಇವರು ಸಮಾಜದ ಅಮಾನವೀಯ ಪದ್ಧತಿಗಳ ವಿರೋಧಿಸಿ ಅನೇಕ ಮಹಿಳೆಯರಿಗೆ ಮಾದರಿಯಾದರು. ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿ ಹಲವಾರು ಬಾರಿ ಕಠಿಣ ಶಿಕ್ಷೆ ಅನುಭವಿಸಿದರೂ ತಮ್ಮ ಶಕ್ತಿಯುತ ಭಾಷಣದಿಂದ ಅನೇಕರನ್ನು ಪ್ರೇರೇಪಿಸಿದರು. ಕ್ರಾಂತಿಕಾರಿ ಮಾತುಗಳಿಂದ ಅನೇಕ ಸ್ತ್ರೀಯರಿಗೆ ಮಾರ್ಗದರ್ಶಿಯಾಗಿದ್ದ ಇವರ ಶ್ರಮ,ಕೂಡುಗೆ ಇಂದಿಗೂ ಅವಿಸ್ಮರಣೀಯ.

## ನಾರಾಯಣ್ ಮಹಾದೇವ ದೋಣಿ (1928 – 1942)



“ಪುಟ್ಟ ಹುತಾತ್ಮ” ಎಂದೇ ಹೆಸರಾದ ನಾರಾಯಣ್ ಮಹಾದೇವ ದೋಣಿಯವರು ಹುಬ್ಬಳ್ಳಿ ಯವರು. ಕೇವಲ 14 ನೇ ವಯಸ್ಸಿಗೆ ಸ್ವಾತಂತ್ರ್ಯದ ಕಿಚ್ಚನ್ನು ಅರಿತು, ಸ್ವಾತಂತ್ರ್ಯಕ್ಕಾಗಿ ತಮ್ಮ ನೆತ್ತರನ್ನು ನೀಡಿದವರು. 1942 ರಲ್ಲಿ ಈ ಪುಟ್ಟ ಬಾಲಕ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಧ್ವನಿಯೆತ್ತಿ ನಗರದ ಉದ್ದಗಲಕ್ಕೂ ನಡೆಸಿದ ಅನೇಕ ಮೆರವಣಿಗೆಗಳ ಮುಂಚೂಣಿ ವಹಿದ್ದನು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಬಾಲ ಹೋರಾಟಗಾರರಲ್ಲಿ ಇವರ ಹೆಸರು ಅಜರಾಮರ.

## ಕಾಕಾ ಕಾರ್ಖಾನೀಸ್ (1890 – 1989)



ಬಿಜಾಪುರದ ಪದ್ಮಶ್ರೀ ಕಾಕಾ ಕಾರ್ಖಾನೀಸ್ ಅವರು ಅಪರೂಪದ ಆಧ್ಯಾತ್ಮಿಕ ಜೀವಿ, ಸ್ವಾತಂತ್ರ ಹೋರಾಟಗಾರ ಹಾಗೂ ನೇರ ನುಡಿಯ ವ್ಯಕ್ತಿ. ತಮ್ಮ ಜೀವನವನ್ನು ದಲಿತರ ಏಳಿಗೆಗಾಗಿ ಸಮರ್ಪಿಸಿದರು. ದಲಿತ ವಸತಿ ಶಾಲೆ ಪ್ರಾರಂಭಿಸಿ 236 ಮಕ್ಕಳನ್ನು ಓದಿಸಿ “ಕರ್ನಾಟಕದ ಗಾಂಧಿ” ಎಂದೇ ಪ್ರಸಿದ್ಧಿಯಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಲ್ಲದೇ ಅಸ್ಪೃಶ್ಯತೆ ನಿವಾರಣೆ, ದೇವದಾಸಿ ಪದ್ಧತಿ ನಿರ್ಮೂಲನೆಗಾಗಿ ಧ್ವನಿ ಎತ್ತಿದ್ದರು. ಸಮಾಜಕ್ಕೆ, ಶಿಕ್ಷಣ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆ ಅಪಾರ.

## ಡಾ॥ ಎನ್.ಸ್. ಹರ್ಡೀಕರ್ (1889 – 1975)



ನಾರಾಯಣ ಸುಬ್ಬರಾವ ಹರ್ಡಿಕರ ಗಾಂಧೀಜಿಯ ತತ್ವಗಳನ್ನು ಪಾಲನೆ ಮಾಡುತ್ತ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಕಲಕತ್ತಾ ವಿಶ್ವವಿದ್ಯಾಲಯ ಮತ್ತು ಅಮೇರಿಕದ ಮಿಷಿಗನ್ ವಿಶ್ವವಿದ್ಯಾಲಯದಿಂದ ವೈದ್ಯಕೀಯ ಪದವಿ ಪಡೆದರು. ಉತ್ತಮ ಸಂಘಟಕರಾದ ಇವರು, ಸೇವಾದಳವನ್ನು ಸ್ಥಾಪಿಸಿದ್ದಲ್ಲದೆ, ಸ್ವಯಂಸೇವಕರಿಗೆ ತರಬೇತಿ ನೀಡಲು ಬಾಗಲಕೋಟೆಯಲ್ಲಿ ತರಬೇತಿ ಸಂಸ್ಥೆಯನ್ನೂ ಆರಂಭಿಸಿದರು. 1939 ರಲ್ಲಿ ಕರ್ನಾಟಕ ಆರೋಗ್ಯ ಸಂಸ್ಥೆಯನ್ನೂ ಸ್ಥಾಪಿಸಿದರು.

## ಶರಣಬಸವರಾಜ ಬೀಸರಹಳ್ಳಿ (1929 – 2021)



ನಿವೃತ್ತ ಶಿಕ್ಷಕ, ಸಮಾಜ ಸೇವಕ, ಸ್ವಾತಂತ್ರ್ಯ ಹೋರಾಟಗಾರ ಶರಣಬಸವರಾಜ ಬೀಸರ ಹಳ್ಳಿಯವರು ಅನೇಕರಿಗೆ ಮಾದರಿಯಾಗಿದ್ದಾರೆ. ಕಾನೂನಿನಲ್ಲಿ ಪದವಿ, ಎರಡು ಸ್ನಾತಕೋತ್ತರ ಪದವಿ ಗಳಿಸಿರುವ ಇವರು 89ನೇ ವಯಸ್ಸಿನಲ್ಲಿ ಕನ್ನಡ ಸಾಹಿತ್ಯದಲ್ಲಿ ಪಿ. ಎಚ್. ಡಿ ಗಳಿಸಿ ಕಲಿಕೆಗೆ ವಯಸ್ಸಿನ ಮಿತಿ ಇಲ್ಲ ಎಂದು ಸಾರಿದರು. ಹೈದರಾಬಾದ್ ವಿಮೋಚನಾ ಚಳವಳಿಯಲ್ಲಿ ಭಾಗವಹಿಸಿದ ಇವರು, ಆ ಸಮಯದಲ್ಲಿ ಪರಿಶಿಷ್ಟ ಜಾತಿಯ ಮಕ್ಕಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಅವರ ಶಿಕ್ಷಣದ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿದರು.

# ಕನ್ನಡ ಭಾಷೆ ಮತ್ತು ಸಾಹಿತ್ಯ ಸಂಭ್ರಮ ಮತ್ತು ಕವಿಗೋಷ್ಠಿ



ನಮ್ಮವರು ಸಂಘ ಹಾಗೂ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಪುಣೆ ಘಟಕದ ವತಿಯಿಂದ ಕನ್ನಡ ಭಾಷೆ ಹಾಗು ಸಾಹಿತ್ಯ ಸಂಭ್ರಮದ ಅಂಗವಾಗಿ ದಿನಾಂಕ 30-ಜೂನ್-2024 ರಂದು ಕನ್ನಡ ಕಲಿ ಪರೀಕ್ಷಾ ಫಲಿತಾಂಶ ಹಾಗು ಕವಿಗೋಷ್ಠಿಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಕವಿಗಳಾದ ಶ್ರೀ ಪಾಂಗಳ ವಿಶ್ವನಾಥ ಶೆಟ್ಟಿ, ಲೇಖಕಿ ಶ್ರೀಮತಿ ಹೇಮಾ ಮಳಗಿ, ಶ್ರೀ ಸದಾನಂದ ತಾವರಗೆರೆ ಹಾಗು ಶ್ರೀ ಬಸವರಾಜ ಪಟ್ಟಣಶೆಟ್ಟಿ ಇವರುಗಳು ದೀಪ ಬೆಳಗಿಸುವ ಮೂಲಕ ಮತ್ತು ಹಚ್ಚೇವು ಕನ್ನಡದ ದೀಪ ಕವಿತೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಇದೇ ಸಂದರ್ಭದಲ್ಲಿ ಕನ್ನಡ ಕಲಿತ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಪದಕಗಳನ್ನು ಕೊಟ್ಟು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ದೂರದ ಔರಂಗಾಬಾದ್ ಮತ್ತು ಮುಂಬೈಯಿಂದ ಬಂದಿದ್ದ ವಿದ್ಯಾರ್ಥಿಗಳು ಪುಣೆಯ ವಿದ್ಯಾರ್ಥಿಗಳೊಂದಿಗೆ ಸೇರಿ ಹೊರನಾಡ ಕನ್ನಡದ ಚಿಣ್ಣರ ಬಳಗ ತಾವು ಕಲಿತ ಕನ್ನಡವನ್ನು ವಿವಿಧ ರೀತಿಯಲ್ಲಿ ಪ್ರದರ್ಶಿಸಿದರು.




ಅದೇ ರೀತಿ ಹಲವಾರು ಮಕ್ಕಳು ತಮ್ಮಲ್ಲಿರುವ ಪ್ರತಿಭೆಯನ್ನು ತೋರಿಸಿ ಹಿರಿಯರ ಆಶೀರ್ವಾದ ಪಡೆದು ಭೇಷ್ ಎನಿಸಿಕೊಂಡರು. ಹಾಗೆ ಭಾರತದ ಚಂದ್ರಯಾನವನ್ನು ವೇಷಭೂಷಣಗಳಲ್ಲಿ ಪ್ರದರ್ಶನ ಮಾಡಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಶಿಕ್ಷಕರುಗಳಾದ ಶ್ರೀಮತಿ ಶಾಂತಲಾ ಬಿರಾದಾರ, ಶ್ರೀಮತಿ ವಿದ್ಯಾ ಮದಲಿ, ಶ್ರೀಮತಿ ಸುನಯನಾ ಮರ್ನಾಡು, ಶ್ರೀಮತಿ ಅದಿತಿ ಗುಡಿ, ಶ್ರೀಮತಿ ಜಯವಿಜಯಾ ರಾವ್

# ಕನ್ನಡ ಭಾಷೆ ಮತ್ತು ಸಾಹಿತ್ಯ ಸಂಭ್ರಮ ಮತ್ತು ಕವಿಗೋಷ್ಠಿ



ಹಾಗೂ ಶ್ರೀಮತಿ ವೀಣಾ ಹುಕ್ಕೇರಿ ಇವರುಗಳಿಗೆ ಕನ್ನಡ ಕಲಿಸಿದ್ದಕ್ಕೆ ಗುರು ಕಾಣಿಕೆಯಂತೆ ತಾವೇ ಕೈಯಾರೆ ತಯಾರಿಸಿದ ಕೆಲವೊಂದು ಉಡುಗೊರೆ ಜೊತೆಗೆ ಸಸಿಗಳನ್ನು ಕೊಟ್ಟು ಗೌರವಿಸಿದರು.

ವಿಶೇಷವಾಗಿ ಪುಣೆಯ ಪಿಂಪ್ರಿ ಚಿಂಚ್ವಾಡದಲ್ಲಿ ಪ್ರಪ್ರಥಮ ಬಾರಿಗೆ ಕನ್ನಡ ಕವಿಗೋಷ್ಠಿ ಯನ್ನು ನೆರವೇರಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಶ್ರೀ ಪಾಂಗಳ ವಿಶ್ವನಾಥ ಶೆಟ್ಟಿ, ಶ್ರೀಮತಿ ಮಮತಾ ಅಂಚನ್, ಶ್ರೀಮತಿ ಅನ್ನಪೂರ್ಣ ಹಾಗು ಶ್ರೀ ಸುಭಾಶ್ಚಂದ್ರ ಸಕ್ರೋಜಿ, ಶ್ರೀ ಗಂಗಾಧರ ಬೆನ್ನೂರ, ಶ್ರೀಮತಿ ಜ್ಯೋತಿ ಕಡೋಳ, ಶ್ರೀ ಮಾಧವ ಕುಲ್ಕರ್ಣಿ, ಶ್ರೀಮತಿ ಕುಸುಮ ಸಾಲಿಯಾನ ಹಾಗು ಶ್ರೀಮತಿ ಹೇಮಾ ಮಳಗಿ ಅವರು ಕನ್ನಡದಲ್ಲಿ ಕವನಗಳನ್ನು ಓದಿ ನೆರೆದಿರುವ ಪ್ರೇಕ್ಷರನ್ನು ರಂಜಿಸಿದರು.

ಈ ಕಾರ್ಯಕ್ರಮಕ್ಕೆ ಬೇಕಾದ ಪೂರ್ವಸಿದ್ಧತಾ ಕೆಲಸಗಳನ್ನು ಶ್ರೀಮತಿ ಝಾನ್ಸಿ ರಾವ್, ಶ್ರೀಮತಿ ಹೇಮಾ ಮಳಗಿ, ಶ್ರೀಮತಿ ಕವಿತಾ ಮಹೇಶ್, ಶ್ರೀ ಬಸವರಾಜ ಪಟ್ಟಣಶೆಟ್ಟಿ, ಶ್ರೀ ಭಾರ್ಗವ, ಶ್ರೀ ಶಿವಾನಂದ ಪಟ್ಟನ್, ಶ್ರೀ ಸತೀಶ್ ಮೆಣಸಿಗಿ, ಶ್ರೀ ಸಂಗಮೇಶ್ ಗುಲ್ ಮತ್ತು ಇನ್ನೂ ಅನೇಕರು ಸೇರಿ ನೆರವೇರಿಸಿದರು.

ಕಾರ್ಯಕ್ರಮದ ಕೊನೆಗೆ ಹಿರಿಯ ಶಿಕ್ಷಕರಾದ ಶ್ರೀ ಸದಾನಂದ ತಾವರಗೇರ ಅವರು ವಂದನಾರ್ಪಣೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ತೆರೆ ಎಳೆಯಲಾಯಿತು.



## ಮುಂಜಾವಿನ ಮಾತು

ಕೆರಳಿಸುವ ಕೋಪ,
ನರಳಿಸುವ ನೋವು
ಗುರುತುಳಿಸಿದ ನೆನಪು
ಕರುಳು ಹಿಂಡುವ ಘಟನೆ
ಮರುಳಾಗಿಸುವ ಆಸೆ
ಗೆರೆ ಹಾಕಿದ ಬದುಕು
ಸೆರೆಯಾಗಿಹ ಭಾವನೆಗಳಲಿ
ಸರಳತೆಯ ಸರಿದೂಗಿಸಿ
ಅರಳುವ ನಗುವೇ ನೀ
ಮನವೇ

**- ರತ್ನಾ ಬಡವನಹಳ್ಳಿ**

## ಪ್ರೇಮ

ಅವನು ನೋಡಿದ ಅವಳೆಡೆಗೆ
ಅವಳ ನೋಟವೂ ಅವನೆಡೆಗೆ
ಅವಳ ತುಟಿ ತಿರುವಿನಲ್ಲಿ
ಮುಗುಳ್ನಗೆಯ ಪ್ರಶ್ನೆ,
ಅವನ ಕಣ್ಣಂಚಿನ ಹೊಳಪಲ್ಲಿ
ಸಿಕ್ಕಿತವಳಿಗೆ ಉತ್ತರ.
ಇದೇ ಅಲ್ಲವೆ ಪ್ರೇಮ!

**- ಮಾಧವ ಕುಲಕರ್ಣಿ**

## ರಶ್ಮಿಯವರ ಟಂಕುಗಳು

ಮನಸೆಂಬುವ ಕನ್ನಡಿ
ನುಡಿ ಕೇಳು.
ಮನಬಂದಂತೆ ವರ್ತಿಸಿ
ಕಾರಣವೇ ನೀನೆಂದು
ದೂರದಿರು.

ನಿರೀಕ್ಷೆಗೊಂದು
ಮಿತಿಯ ಕಡಿವಾಣ
ಹೇರಿ ಸಾಗು ನೀ
ಪರೀಕ್ಷೆಗೂ ಮುನ್ನವೇ
ಸೋಲೊಪ್ಪದಿರು ನೀ

## ಜೀವನ ಮರ್ಮ

ಚಹಾದಲ್ಲಿ ಪಾರ್ಲೆ ಬಿಸ್ಕಿಟ್ ಎಲ್ಲಿ ತನಕ ಮುಳುಗಿಸಿ ಹಿಡಿಯಬೇಕು ಅಂತ ಅಂದಾಜು ಬರುತ್ತೋ......

ಆವಾಗಲೇ ನಿಮಗೆ ಜೀವನ ತಿಳಿಯಿತು ಎಂದು ತಿಳಿಯಿರಿ !!!!! 🫠

- ಕುಂದನ್ ಎಡ್ಡೆ

## ಮರೆತ ಪಾಯಿಂಟ್

ಜಗಳವಾಡಿದ ನಂತರ ಎಂದಾದರೂ ನಿಮಗೆ ಈ ತರಹ ಅನಿಸಿದೆಯಾ !?!?
"ಅರೆರೆ..... ಈ ಪಾಯಿಂಟ್ ಹೇಳೋದನ್ನ ಮರೆತೆ ಬಿಟ್ಟೆನಲ್ಲಾ !!! 🫠

- ಕುಂದನ್ ಎಡ್ಡೆ

ಜಾಹೀರಾತು

ನಿಮ್ಮ ಜೀವನ ಸುರಕ್ಷಿತವಾಗಿದೆಯೇ?

ಸಾವಿರಾರು ಕುಟುಂಬಗಳಿಗೆ ಜೀವನ ಸುರಕ್ಷತೆಯ ಸಲಹೆ ನೀಡಿ,
ಆಪತ್ಕಾಲದಲ್ಲಿ ಅವರೊಡನೆ ನಿಂತ, ಸೂಪರ್ ಸ್ಟಾರ್ LIC ಸಲಹೆಗಾರ್ತಿ,

ಶತಕವೀರ ( 2012 ರಿಂದ ), ಕೋಟ್ಯಾಧಿಪತಿ ( 2015 ರಿಂದ ),
MDRT ( 19 ಸಲ ), Court of Table ( 4 ಸಲ )



ಶ್ರೀಮತಿ ಮೀನಾಕ್ಷಿ ಕೋಹಳ್ಳಿ
Mob: 94228 31054

LIC भारतीय जीवन बीमा निगम LIFE INSURANCE CORPORATION OF INDIA

"ಯೋಗಕ್ಷೇಮಂ ವಹಾಮ್ಯಹಂ" ಅಂದರೆ "ನಿಮ್ಮ ಕಲ್ಯಾಣ ನಮ್ಮ ಜವಾಬ್ದಾರಿ".

Superstar LIC Agent (MDRT, Crorepati & Shatakveer)
Galaxy Club since 2018
Corporate Club since 2023
LIMRA Internation Quality Award

ಅವರ ಯಶಸ್ಸಿನ ಹಿಂದಿನ ಬೆಂಬಲ; ಅನುಭವಿ ಮಾರ್ಗದರ್ಶಕ
ಶ್ರೀ ರಮೇಶ ಕೋಹಳ್ಳಿ – Email: ramesh.kohalli@gmail.com
Mob: 94220 37473



*ಶ್ರೀ ಚಂದ್ರಕಾಂತ ಹಾರಕೂಡೆ*

# ಬಳಪ ಹಿಡಿದ ಭಗವಂತ

ಶಿಕ್ಷಣ ಬರೀ ವೃತ್ತಿಯಲ್ಲ. ಮಕ್ಕಳ ಭವಿಷ್ಯವನ್ನು ರೂಪಿಸುವ ಮಹತ್ತರ ಜವಾಬ್ದಾರಿ. ಅದರಲ್ಲೂ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂದು ಕಳಕಳಿಯಿಂದ ಕೆಲಸ ಮಾಡುವ ಶಿಕ್ಷಕರು ಅತ್ಯಂತ ವಿರಳ. ಅಂಥವರ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲುವ ವ್ಯಕ್ತಿ ಶ್ರೀ ಚಂದ್ರಕಾಂತ ಹಾರಕೂಡೆ. ಪುಣೆಯ ನಾಮಾಂಕಿತ ಡಾ. ಕಲ್ಮಾಡಿ ಶಾಮರಾವ್ ಕನ್ನಡ ಮಾಧ್ಯಮ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕರ್ನಾಟಕದಿಂದ ಹೊಟ್ಟೆಪಾಡಿಗಾಗಿ ಬರುವ ವಲಸಿಗರ ಮಕ್ಕಳ ಶಿಕ್ಷಣ ಅಲ್ಲಿಯೇ ನಿಲ್ಲಬಾರದೆಂದು ೧೯೬೩ ರಲ್ಲಿ ಡಾ. ಕಲ್ಮಾಡಿ ಶಾಮರಾವ್ ಮತ್ತು ದಿ. ಶ್ರೀ ಗುಂಡೂರಾಜ್ ಶೆಟ್ಟಿಯವರೇ ಮೊದಲಾದ ಸಮಾಜಪರ ವ್ಯಕ್ತಿಗಳು ಕನ್ನಡ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿದರು. ಕಳೆದ ವರ್ಷ ತಾನೇ ಕನ್ನಡ ಮಾಧ್ಯಮ ಶಾಲೆ ತನ್ನ ವಜ್ರ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿಕೊಂಡಿತು. ಕರ್ನಾಟಕದಲ್ಲೇ ಕನ್ನಡ ಮಾಧ್ಯಮ ಶಾಲೆಗಳು ಮುಚ್ಚಿಕೊಂಡು ಹೋಗುತ್ತಿರುವ ಸ್ಥಿತಿಯಲ್ಲಿ ಪರರಾಜ್ಯದಲ್ಲಿ ಕಳೆದ ೬೦ ವರ್ಷಗಳಿಂದ ಕನ್ನಡ ಮಾಧ್ಯಮ ಶಾಲೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದೆ ಎಂದರೆ ನಿಸ್ವಾರ್ಥ ಮನಸಿನಿಂದ ಸೇವೆ ಮಾಡುತ್ತಿರುವ ಕನ್ನಡ ಸಂಘದ ಪದಾಧಿಕಾರಿಗಳು ಮತ್ತು ಹಾರಕೂಡೆ ಯವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕ ಸಿಬ್ಬಂದಿಯೇ ಕಾರಣ.

ಶ್ರೀ ಚಂದ್ರಕಾಂತ ಹಾರಕೂಡೆಯವರು ಕಲ್ಯಾಣ ಕರ್ನಾಟಕದ ಬೀದರ ಜಿಲ್ಲೆಯ ಮಂಠಾಳದಲ್ಲಿ ಹುಟ್ಟಿದವರು. ೧೦ ನೇ ತರಗತಿಯ ವರೆಗೆ ಹುಟ್ಟೂರಿನಲ್ಲಿ ಶಿಕ್ಷಣ ಮುಗಿಸಿ ಮುಂದಿನ ಪದವಿ ಪೂರ್ವ ಮತ್ತು ಪದವಿ ಶಿಕ್ಷಣವನ್ನು ಬಸವ ಕಲ್ಯಾಣ ಮತ್ತು ಕಲಬುರ್ಗಿಯಲ್ಲಿ ಮುಗಿಸಿ ನಂತರ ಪುಣೆಗೆ ಬಂದು ಎಂ.ಎಡ್ ಪದವಿಯನ್ನು ಮುಗಿಸಿ ೧೯೯೪ರಲ್ಲಿ ಶಿಕ್ಷಕರಾಗಿ ಡಾ. ಕಲ್ಮಾಡಿ ಶಾಮರಾವ್ ಕನ್ನಡ ಮಾಧ್ಯಮ ಮಾಧ್ಯಮಿಕ ಶಾಲೆಯಲ್ಲಿ ಸೇವೆ ಪ್ರಾರಂಭಿಸಿದರು. ಮುಂದೆ ೨೦೦೯ ರಿಂದ ಪ್ರಾಂಶುಪಾಲರಾಗಿ ಸೇವೆ ಮುಂದುವರೆಸಿದರು. ಬಾಲ್ಯದಿಂದಲೇ ತಂದೆಯವರ ಆದರ್ಶ ವ್ಯಕ್ತಿತ್ವ ಮತ್ತು ತಾಯಿಯವರ ಶಾಂತ ಸ್ವಭಾವದಿಂದ ಪ್ರಭಾವಿತರಾದ ಹಾರಕೂಡೆಯವರು ನೈತಿಕ ಮೌಲ್ಯಗಳು, ಕುಟುಂಬವನ್ನು ಒಟ್ಟುಗೂಡಿಸಿ ನಡೆವ ಸಂಸ್ಕೃತಿಗೆ ಅಪಾರ ಪ್ರಾಮುಖ್ಯತೆ ನೀಡುತ್ತಾರೆ. ಓದುವದು, ಸಂಗೀತ ಕೇಳುವದು ಇವರ ಹವ್ಯಾಸಗಳು.

ಎಲೆಮರೆಯ ಹೂವಿನಂತೆ ಕಾರ್ಯ ಮಾಡುವ ಇವರು ಯಾವ ಪ್ರಶಸ್ತಿಗಾಗಿ, ಪ್ರಸಿದ್ಧಿಗಾಗಿ ಕೆಲಸ ಮಾಡಿಲ್ಲ. ಕೆಳಕಂಡ ಉದಾಹರಣೆಗಳು ಇದಕ್ಕೆ ಸಾಕ್ಷಿ. ತಂದೆ ಇಲ್ಲದ ವಿದ್ಯಾರ್ಥಿಯೊಬ್ಬ ಪುಣೆಯಲ್ಲಿ ಎಲ್ಲಿ ಉಳಿದುಕೊಂಡು ಅಭ್ಯಾಸ ಮುಂದುವರೆಸಲಿ ಎಂದು ಊರಿಗೆ ಮರಳಬೇಕು ಎಂದುಕೊಂಡಾಗ ಶಾಲೆಯಲ್ಲೇ ಉಳಿಸಿಕೊಂಡು ದಿನವೂ ಸ್ವತಃ ಅಡಿಗೆ ಮಾಡಿ, ಊಟ ತಂದುಕೊಟ್ಟ ಪ್ರಾಂಶುಪಾಲರು ಇವರು.

## ಬಳಪ ಹಿಡಿದ ಭಗವಂತ



ಕೋವಿಡ್ ಸಮಯದಲ್ಲಿ ಊರಿಗೆ ಹೋದ ವಿದ್ಯಾರ್ಥಿನಿಯೊಬ್ಬಳು ಮತ್ತೆ ಶಾಲೆಗೆ ಬರಲೇ ಇಲ್ಲ. ಅವಳ ಮದುವೆಯಾಯಿತೆಂದು ವಿಷಯ ತಿಳಿಯಿತು. ಅಲ್ಲಿಗೆ ನಿಲ್ಲದ ಇವರು ಆ ವಿದ್ಯಾರ್ಥಿನಿಗೆ ಪುಸ್ತಕ ಕಳಿಸಿ, ಆನ್ಲೈನ್ ವರ್ಗ ತೆಗೆದುಕೊಂಡು ಪರೀಕ್ಷೆಗೆ ಕೂಡಿಸುವ ವ್ಯವಸ್ಥೆ ಮಾಡಿದರು. ಮತ್ತೊಂದು ಮನಸಲ್ಲಿ ನೆಲಸುವ ಸಂಗತಿ ಎಂದರೆ ತಂದೆ ತೀರಿದ ಸುದ್ದಿ ತಿಳಿದ ವಿದ್ಯಾರ್ಥಿಯೊಬ್ಬ ಕರ್ನಾಟಕದ ಊರಿಗೆ ತೆರಳಿದ. ಆದರೆ ಅವನ ಎಸ್ಸೆಸ್ಸೆಲ್ಸಿ ಪರೀಕ್ಷೆ ತಪ್ಪಿದರೆ ಇಡೀ ವರ್ಷ ವ್ಯರ್ಥವಾಗುತ್ತದೆ ಎಂಬ ಕಳಕಳಿ ಹಾರಕೂಡೆ ಗುರುಗಳದ್ದು. ಸರಿ, ಕೆಲವು ವಿದ್ಯಾರ್ಥಿಗಳ, ಶಿಕ್ಷಕರ ಸಹಾಯದಿಂದ ಆ ಹುಡುಗನ ಸಮವಸ್ತ್ರ, ಊಟದ ಡಬ್ಬಿ ಮೊದಲು ಮಾಡಿ ತೆಗೆದುಕೊಂಡು ರೈಲ್ವೆ ನಿಲ್ದಾಣಕ್ಕೆ ಧಾವಿಸಿದವರು ಇವರು. ಅಲ್ಲಿಂದ ನೇರವಾಗಿ ಪರೀಕ್ಷೆಗೆ ಕೂಡಿಸಿದ ನಂತರವೇ ಅವರಿಗೆ ಸಮಾಧಾನ.

ಹುಡುಗಿಯರು ಪ್ರಾಯಕ್ಕೆ ಬಂದರು ಎಂದರೆ ಮನೆಯ ಹಿರಿಯರು ಹುಡುಗಿಯ ಮದುವೆ ನಿಶ್ಚಯಿಸುತ್ತಾರೆ. ಶಾಲೆಗೆ ತಿಳಿಸದೇ ಪರಸ್ಪರ ಮದುವೆ ಮಾಡಿಸಿ ತಮ್ಮ ಜವಾಬ್ದಾರಿಯಿಂದ ಪಾರಾದೆ ಎಂದು ತೃಪ್ತಿ ಪಡುವ ಬಡ ಪಾಲಕರು. ಇದಕ್ಕೆ ಸಾಮಾಜಿಕ ಪರಿಸ್ಥಿತಿ ಕೂಡ ಕಾರಣ. ಪೋಷಕರ ಮನಒಲಿಸಿ, ಶಿಕ್ಷಣದ ಮಹತ್ವ ಮನಗಾಣಿಸುತ್ತಾರೆ. ಅಲ್ಲದೆ ವಿದ್ಯಾರ್ಥಿ ವೇತನದ ವ್ಯವಸ್ಥೆ ಮಾಡಿಸಿ ಹುಡುಗಿಯರಿಗೆ ಮಹಾವಿದ್ಯಾಲಯ ವರೆಗೆ ಶಿಕ್ಷಣ ಪಡೆಯುವಂತೆ ನೋಡಿಕೊಳ್ಳುವ ಶಿಕ್ಷಣ ದಾಸೋಹಿ ಇವರು. ಇಲ್ಲಿಯವರೆಗೆ ಈ ಶಾಲೆಯಿಂದ 180 ಕ್ಕೂ ಮೀರಿ ವಿದ್ಯಾರ್ಥಿನಿಯರು ಈ ಲಾಭ ಪಡೆದಿದ್ದಾರೆ. ಉಚ್ಚಶಿಕ್ಷಣ ಪಡೆದು ವಿವಿಧ ಕ್ಷೇತ್ರಗಳಲ್ಲಿ ಕಾರ್ಯಮಾಡುತ್ತಿದ್ದಾರೆ.

ಇವರ ಮಾರ್ಗದರ್ಶನ ಮತ್ತು ಕನ್ನಡ ಸಂಘದ ಬೆಂಬಲದಿಂದ ಇತ್ತೀಚೆಗೆ ಕನ್ನಡ ಮಾಧ್ಯಮದ ಇಬ್ಬರು ವಿದ್ಯಾರ್ಥಿನಿಯರು ಅಮೆರಿಕಾದ ಹೂಸ್ಟನ್ ನಲ್ಲಿ ರೊಬೊಟಿಕ್ಸ್ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದರು.

ಶಿಕ್ಷಣ ಯಾಂತ್ರಿಕವಾಗುತ್ತಿರುವ ಜಗತ್ತಿನಲ್ಲಿ ಬಡ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಶ್ರಮಿಸುವ ಇಂಥ ವ್ಯಕ್ತಿಗಳು ಅಪರೂಪ. ಹಾರಕೂಡೆ ಗುರುಗಳು ಬಳಪ ಹಿಡಿದ ಭಗವಂತ ಎಂದರೆ ಅತಿಶಯೋಕ್ತಿ ಏನಲ್ಲ.

ಸ್ವಂತ ಉದ್ದೇಶಕ್ಕಾಗಿ ಶಿಕ್ಷಕನಾಗಬೇಡ ಮಕ್ಕಳ ಅಭ್ಯುದಯಕ್ಕೆ ಜೀವನ ಮೀಸಲು ಇಡುವದಿದ್ದರೆ ಮಾತ್ರ ಬಾ ಎಂದು ಸಂದೇಶ ನೀಡುವ ಹಾರಕೂಡೆ ಗುರುಗಳು ತಮ್ಮ ವೃತ್ತಿ ಜೀವನವನ್ನು ಮಕ್ಕಳಿಗಾಗಿ ಧಾರೆ ಎರೆದು ಇದೇ ತಿಂಗಳಲ್ಲಿ ಸೇವೆಯಿಂದ ನಿವೃತ್ತರಾಗುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಕನ್ನಡ ಮಾಧ್ಯಮ ಶಾಲೆ ಇನ್ನೂ ಹೆಚ್ಚಿಗೆ ಅಭಿವೃದ್ಧಿ ಹೊಂದಲಿ. ದೇವರು ಹಾರಕೂಡೆ ಗುರುಗಳಿಗೆ ಆಯುರಾರೋಗ್ಯ ನೀಡಿ ಆಶೀರ್ವದಿಸಲಿ ಎಂಬುದು ನಮ್ಮೆಲ್ಲರ ಹಾರೈಕೆ .

# ಕಾವ್ಯ ಮಲ್ಲಿಗೆ



## ಇಂದಿರಾ ಮೋಟೆಬೆನ್ನೂರ

ಬೆಳಗಾವಿಯವರಾದ ಇಂದಿರಾ ಅವರು ಅನೇಕ ಸಂಘ, ಸಂಸ್ಥೆಗಳ ಆಜೀವ ಸದಸ್ಯರಾಗಿದ್ದು, ತಮ್ಮನ್ನು ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಅವರ ಅನೇಕ ಕವನಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರ ಕವನ "ಗುಜರಿ"ಗೆ 'ಕರ್ಮವೀರ' ಪತ್ರಿಕೆಯವರು ಏರ್ಪಡಿಸಿದ್ದ ರಾಜ್ಯೋತ್ಸವ ಕವನ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ದೊರೆತಿದೆ.

ಸಮಾಗಮ ಮತ್ತು ಸಂಯುಕ್ತ ಎಂಬ ಎರಡು ಸಂಪಾದನ ಗ್ರಂಥಗಳಲ್ಲದೇ ಅನೇಕ ಬಿಡಿ ಲೇಖನಗಳನ್ನೂ ಪ್ರಕಟಿಸಿದ್ದಾರೆ.

## ನಿನಗಾಗಿ

ಅವನು ಬರುವನೆಂದು ಕಂಗಳಲಿ,
ತಿಂಗಳನ ಬೆಳದಿಂಗಳನು ಮುಚ್ಚಿಟ್ಟಿರುವೆ..
ಮೊಗದ ಮುಗುಳ್ನಗೆಯಲಿ
ಎದೆ ತರಿವ ನೋವುಗಳನು ಬಚ್ಚಿಟ್ಟಿರುವೆ..

ಹಾದಿಗೆಲ್ಲ ನಗೆ ಹೂವಹಾಸಿ
ಸುಡುವ ಎದೆಕದವನು ತೆರೆದಿಟ್ಟಿರುವೆ..
ಜತನದಿ ಕೊಲುವ ನೆನಪುಗಳ
ಸವಿ ಸುರುಳಿಯನು ಕಾಪಿಟ್ಟಿರುವೆ.

ಒಲವ ರಾಗವದು ಮಿಡಿದ
ನೂರೊಂದು ಭಾವಗಳನು ಹೆಪ್ಪಿಟ್ಟಿರುವೆ..
ಮೌನದ ಯಾನದಲಿ ಕಂಗಳಲಿ
ಕುಣಿವ ಕನಸುಗಳನು ಕಟ್ಟಿಟ್ಟಿರುವೆ..

ಹಿತ್ತಲಿನ ಹಂದರದಿ ಪಿಸುಗುಡುವ
ಮಲ್ಲಿಗೆ ಮೊಗ್ಗುಗಳನ್ನು ಮುತ್ತಿಟ್ಟಿರುವೆ
ಮಾಮರದ ಕೋಗಿಲೆಯ ಇಂಚರಕೆ
ಒಲುಮೆ ಗೆಜ್ಜೆಯನು ತೂಗಿಟ್ಟಿರುವೆ..


ತುಟಿಯ ಜೇನಂಚಲಿ ನಭದ ನಕ್ಷತ್ರಗಳ
ಮೊಗದ ನಗುವನು ಅದ್ದಿಟ್ಟಿರುವೆ..
ಶಶಿಯನು ಇಂದುವಿನ ಉಸಿರಲಿ ಬೆರೆಸಿ
ಒಲವ ಹಣತೆಯನು ಹಚ್ಚಿಟ್ಟಿರುವೆ..

# ನಮ್ಮವರ ಆರೋಗ್ಯ ಶಿಬಿರ



*ಪುಣೆಯಲ್ಲಿ ನಮ್ಮವರು ಸಂಘದಿಂದ ಯಶವಂತರಾವ್ ಚವ್ಹಾಣ್ ಪ್ರಾಥಮಿಕ ಮತ್ತು ಮಾಧ್ಯಮಿಕ ಆಶ್ರಮದ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ.*

ದಿನಾಂಕ ೨೦-ಜುಲೈ-೨೦೨೪ ರಂದು ನಮ್ಮವರು ಸಂಘದಿಂದ ಪುಣೆಯ ಯಶವಂತರಾವ್ ಚವ್ಹಾಣ್ ಪ್ರಾಥಮಿಕ ಮತ್ತು ಮಧ್ಯಮಿಕ ಆಶ್ರಮ ಶಾಲೆ, ಭೋಸರಿಯಲ್ಲಿ ಮಕ್ಕಳಿಗೆ ಉಚಿತವಾಗಿ ವೈದ್ಯಕೀಯ ತಪಾಸಣೆ ಕಾರ್ಯಕ್ರಮವನ್ನು ಮಾಡಲಾಯಿತು.




ಮಕ್ಕಳಲ್ಲಿ ಹಿಮೋಗ್ಲೋಬಿನ್ ತಪಾಸಣೆ ಮಾಡಿ ಆಹಾರದಲ್ಲಿ ಇರುವ ಪೌಷ್ಟಿಕಾಂಶದ ಕೊರತೆಯನ್ನು ಪೂರೈಸಲು ಸಮಾಜ ಕಲ್ಯಾಣದ ಕಾರ್ಯವನ್ನು ನಮ್ಮವರು ಸಂಘ ಮತ್ತು ವೈದ್ಯರಾದ ಶ್ರೀಮತಿ ರಾಧಾ ಕಟ್ಟಿ ಅವರ ಸಹಯೋಗದೊಂದಿಗೆ ಆಯೋಜಿಸಲಾಯಿತು. ವೈದ್ಯರಾದ ಶ್ರೀಮತಿ ಡಾ. ರಾಧಾ ಕಟ್ಟಿ, ಅವರು ಸಧೃಡ ಆರೋಗ್ಯ ಹಾಗೂ ಮಕ್ಕಳಲ್ಲಿ ಸ್ವಯಂ ಸ್ವಚ್ಛತೆ ಕಾಪಾಡಿಕೊಳ್ಳುವ ಪರಿಯನ್ನು ಮತ್ತು ಹೆಣ್ಣುಮಕ್ಕಳಿಗೆ ಋತುಚಕ್ರದ ಸಮಯದಲ್ಲಿ ಸೋಂಕು ತಗಲದಂತೆ ನೈರ್ಮಲ್ಯವನ್ನು ಕಾಪಾಡಿಕೊಳ್ಳುವ ಕ್ರಮಗಳನ್ನು ವಿಡಿಯೋಗಳ ಮೂಲಕ ತೋರಿಸಿ ಮಕ್ಕಳಲ್ಲಿ ಜಾಗೃತಿಯನ್ನು ಮೂಡಿಸಿದರು. ಹಿಮೋಗ್ಲೋಬಿನ್ ಪ್ರಮಾಣ ಪರಿಶೀಲಿಸಲು ನಿದಾನ್ ಲ್ಯಾಬೋರೇಟರಿಯ ಡಾ. ಸುಹಾಸ್ ಎ ಉಂಕಡ ದಂಪತಿಗಳ ಮತ್ತು ಸಿಬ್ಬಂದಿಗಳ ಸಹಕಾರ ಶ್ಲಾಘನೀಯ.

ಇದಲ್ಲದೆ ಮಕ್ಕಳಿಗಾಗಿ ಸಂಗೀತ ಹಾಗೂ ನೃತ್ಯದೊಂದಿಗೆ ಮನೋರಂಜನೆಯ ಕಾರ್ಯಕ್ರಮವನ್ನು ನಡೆಸಲಾಯಿತು. ಆಶ್ರಮದ ಪೂರ್ವ ಪ್ರಾಥಮಿಕದ ಪ್ರಾಧ್ಯಾಪಕರಾದ ಶ್ರೀಯುತ ಶರದ ಖೋಪಡೆ ಹಾಗೂ ಆಶ್ರಮದ ಪ್ರಾಥಮಿಕ ಪ್ರಾಧ್ಯಾಪಕರಾದ ಶ್ರೀಯುತ ಗೋರಖ ಶಿಂಧೆ ಇವರುಗಳು ಎಲ್ಲಾ ಸೌಕರ್ಯವನ್ನು ಒದಗಿಸಿ ಕಾರ್ಯಕ್ರಮ ಸುಗಮವಾಗಿ ನಡೆಯಲು ಸಹಕರಿಸಿದರು.

ಈ ಸಮಾಜ ಸೇವೆಯಲ್ಲಿ ನಮ್ಮವರು ಸಂಘದ ಸದಸ್ಯರಾದ ಬಸವರಾಜ ಪಟ್ಟಣಶೆಟ್ಟಿ, ಅಮಿತ್ ಇನಾಮದಾರ, ಶಿವಾನಂದ ಪಟ್ಟಣ, ವೆಂಕಟೇಶ ಕುಲಕರ್ಣಿ, ಸತೀಶ ಮೆಣಸಿಗಿ, ಭಾರ್ಗವ ಎಂ ಆರ್, ಶ್ರೀಮತಿ ಝೂನ್ಸಿ ರಾವ್, ಕವಿತಾ ಮಹೇಶ್, ದೀಪ್ತಿ ಇನಾಮದಾರ, ಶ್ವೇತಾ ವಿ ಕುಲಕರ್ಣಿ, ರೂಪಾ ಬಿ ಪಟ್ಟಣಶೆಟ್ಟಿ, ಹೇಮಾ ಡಿ ಮಳಗಿ ಹಾಗೂ ಇನ್ನೂ ಅನೇಕರು ಭಾಗಿಯಾಗಿದ್ದರು.

ಆಶ್ರಮದ ವತಿಯಿಂದ ನಮ್ಮವರು ಸಂಘದ ಸದಸ್ಯರನ್ನು ಗೌರವಿಸಿ ಬೀಳ್ಕೊಡಲಾಯಿತು.

# ಕಾವ್ಯ ಮಲ್ಲಿಗೆ

ಸ್ವಾತಂತ್ರ್ಯೋತ್ಸವ ತಿಂಗಳಿಗಾಗಿ ಕವನ ಬರೆಯುವ ಕರೆಗೆ ಓಗೊಟ್ಟು ಕಂಪು ಬಳಗದ ಅನೇಕ ರಾಷ್ಟ್ರಭಕ್ತ ಕವಿ-ಕವಿಯಿತ್ರಿಯರು ತಮ್ಮ ಕಾವ್ಯಸಿರಿ ಹಂಚಿದರು. ಈ ಸಂದರ್ಭದಲ್ಲಿ ಶ್ರೀ ಅಚ್ಯುತ ಕುಲಕರ್ಣಿ ಯವರು ಬರೆದ ಕವನ ಪ್ರಸ್ತುತ ಪಡಿಸುತ್ತಿದ್ದೇವೆ.

## || ನನ್ನ ಭಾರತ ||

ಎಲ್ಲಿಯೇ ಹೋಗು ಏನಾದರೂ ಮಾಡು
ಭಾರತ ದೇಶವನ್ನು ಮರೆಯಬೇಡ
ಹೇಗೆಯೇ ಇರು ಸ್ವೇಚ್ಚತೆಯ ಮೆರೆದಾಡು
ಭಾರತದ ಸಂಸ್ಕೃತಿ ತೊರೆಯಬೇಡ

ಸಮಯದೊಂದಿಗೆ ನೀ ಅವಶ್ಯ ಬದಲಾಗು
ದೇಶಪ್ರೇಮ ಮಾತ್ರ ಬಿಡಬೇಡ
ಹೊಸ ಗುರಿಗಳತ್ತ ಅವಶ್ಯ ಸಾಗು
ರಾಷ್ಟ್ರರಕ್ಷಣೆಯ ಹೊಣೆ ಮರೆಯಬೇಡ

ಯಾವ ಧರ್ಮವನು ಅನುಸರಿಸಿ ನಡೆದರೇನು
ರಾಷ್ಟ್ರಧರ್ಮ ನಿನ್ನ ಉಸಿರಾಗಿರಲಿ
ವೇಷ ಭಾಷೆಗಳ ಕಡಿವಾಣವೇತಕೆ ನಿನಗಿನ್ನು
ಹೃದಯದಲಿ ಭಾರತಾಂಬೆ ರಾರಾಜಿಸಲಿ

ಬದುಕಿನ ಪಯಣದಲಿ ದಣಿದು ಸೋತರೇನು
ದೇಶಸೇವೆಗೆ ಸದಾ ಸಿದ್ಧವಾಗಿರು
ಎಂಥ ದುಃಖವೇ ಬದುಕು ಆವರಿಸಿದರೇನು
ಭಾರತಮಾತೆಗೆ ಜೀವ ಮುಡಿಪಾಗಿರಿಸು

ನನ್ನ ಮನೆ,ಪರಿವಾರ ಬಂಧು ಬಳಗದ ಪ್ರೀತಿಯಲೂ
ಭಾರತಾಂಬೆಯ ಪ್ರೀತಿ ಉಚ್ಚ ಸ್ಥಾನದಲ್ಲಿರಲಿ
ನನ್ನವರಿಗಾಗಿ ಬದುಕು ಸದಾ ಸಾಗಿರುತಿರಲೂ
ನನ್ನ ದೇಶವೆಂಬ ಅಭಿಮಾನ ಸದಾ ನಿನಗಿರಲಿ

## ಕವಿ ಪರಿಚಯ



### ಅಚ್ಯುತ ಕುಲಕರ್ಣಿ

ಶ್ರೀಯುತ ಅಚ್ಯುತ ಕುಲಕರ್ಣಿ ಮೂಲತಃ ಬೆಳಗಾವಿ ಜಿಲ್ಲೆಯ ಗೋಕಾಕದವರು. ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರರು. 34 ವರುಷಗಳವರೆಗೆ ಕೇಂದ್ರ ಪರಮಾಣು ಶಕ್ತಿ ಇಲಾಖೆಯ, ಲೇಸರ್ ವಿಜ್ಞಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ, ನಿವೃತ್ತಿಯಾಗಿ ಈಗ ಬೆಂಗಳೂರಿನಲ್ಲಿ ವಾಸಿಸುತ್ತಿರುವರು.

ಕನ್ನಡ, ಇಂಗ್ಲಿಷ್, ಮತ್ತು ಹಿಂದಿ ಭಾಷೆಗಳಲ್ಲಿ ಕವನ ಬರೆಯುವದು ಮತ್ತು ಓದುವುದು ಅವರ ಹವ್ಯಾಸ. ಕನ್ನಡದಲ್ಲಿ "ಕನಸು ಮತ್ತು ನನಸು" ಹಿಂದಿಯಲ್ಲಿ "ಕೊರೊನಾ ಏಕ್ ಸುನಾಮಿ" ಎಂಬ ಎರಡು ಕವನ ಪುಸ್ತಕಗಳನ್ನು "ನೋಶನ್ ಪ್ರೆಸ್" ಕಡೆಯಿಂದ ಬಿಡುಗಡೆ ಮಾಡಿದ್ದಾರೆ.

# ಪುಣೆಯ ಡಾ. ಕಲ್ಮಾಡಿ ಶ್ಯಾಮರಾವ್ ಹೈಸ್ಕೂಲ್ ಕನ್ನಡ ಮಾಧ್ಯಮ ಶಾಲೆಯ ವಜ್ರ ಮಹೋತ್ಸವ ಸಮಾರೋಪದ ಸಮಾರಂಭ






## *“ಬುದ್ಧಿಗಿಂತ ನಾವು ಹೃದಯದಿಂದ ಕಾರ್ಯ ಮಾಡಿದರೆ ಪರಿಪೂರ್ಣತೆಯನ್ನು ಕಾಣಲು ಸಾಧ್ಯ” - ಡಾ. ಗುರುರಾಜ್ ಕರಜಗಿ.*

ಪುಣೆಯ ಡಾ. ಕಲ್ಮಾಡಿ ಶಾಮರಾಮ್ ಹೈಸ್ಕೂಲ್ ಕನ್ನಡ ಮಾಧ್ಯಮ ಶಾಲೆಯ ವಜ್ರ ಮಹೋತ್ಸವ ಸಮಾರೋಪದ ಸಮಾರಂಭ ಕನ್ನಡ ಸಂಘದ ಶಕುಂತಲಾ ಜಗನ್ನಾಥ್ ಶೆಟ್ಟಿ ಸಭಾಂಗಣದಲ್ಲಿ ವಿಜೃಂಭಣೆಯಿಂದ ನೆರವೇರಿತು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್ ಎಂಬ ಸಂಸ್ಥೆ ಪ್ರಾರಂಭಿಸಿ 3 ಲಕ್ಷಕ್ಕೂ ಅಧಿಕ ಶಿಕ್ಷಕರಿಗೆ ತರಬೇತಿ ನೀಡಿರುವ ಕನ್ನಡದ ಖ್ಯಾತ ಶಿಕ್ಷಣತಜ್ಞ, ವಾಗ್ಮಿಗಳಾದ ಡಾ|| ಗುರುರಾಜ್ ಕರಜಗಿಯವರು ಭಾಗವಹಿಸಿದ್ದರು.

ಮುಖ್ಯ ಅತಿಥಿ ಡಾ. ಗುರುರಾಜ್ ಕರಜಗಿ ಅವರು, ನೆರೆದ ಗಣ್ಯರು ದೀಪವನ್ನು ಪ್ರಜ್ವಲಿಸಿ ಉದ್ಘಾಟಿಸಿದರು. ಮುಖ್ಯಗುರುಗಳಾದ ಶ್ರೀಯುತ ಚಂದ್ರಕಾಂತ ಹಾರಕೂಡೆ ಅವರು ಅತಿಥಿಗಳನ್ನು ಸಭೆಗೆ ಪರಿಚಯಿಸುತ್ತ, ಕನ್ನಡ ಮಾಧ್ಯಮ ಶಾಲೆಯಲ್ಲಿ ಆದ ಪ್ರಗತಿಯ ಬಗ್ಗೆ ತಿಳಿಸಿದರು. ಗುರುರಾಜ್ ಕರಜಗಿ ಅವರಂಥ ಮಹಾನ್ ವಾಗ್ಮಿಗಳಿಂದ ನಮ್ಮ ಶಾಲೆಯ ಸೊಬಗು ಹೆಚ್ಚಿತು ಎಂದರು. ಇದೇ ಸಂದರ್ಭದಲ್ಲಿ ಕಲಿ-ನಲಿ ಎಂಬ ಪುಸ್ತಕವನ್ನು ಕರಜಗಿ ಬಿಡುಗಡೆಗೊಳಿಸಿದರು.

ಕನ್ನಡ ಮಾಧ್ಯಮದ ಮಕ್ಕಳಿಂದ ‘ನುಡಿದರೆ ಮುತ್ತಿನ ಹಾರದಂತಿರಬೇಕು’ ಮತ್ತು ಚೆನ್ನವೀರ ಕಣವಿಯವರ ‘ವಿಶ್ವವಿನೂತನ ವಿದ್ಯಾಚೇತನ’ ಎಂಬ ಹಾಡಿನೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ವಿದ್ಯಾರ್ಥಿಗಳು ವಚನಕಾರರ, ಡಿವಿಜಿಯವರ ಕಗ್ಗದ ಮೇಲೆ ಮನಮೋಹಕ ನೃತ್ಯಗಳನ್ನು ಪ್ರಸ್ತುತಪಡಿಸಿದರು. ಶಾಲೆಯು ಬೆಳೆದು ಬಂದ ಸಾಧನೆಯನ್ನು ಕಿರುಚಿತ್ರದ ಮೂಲಕ ಚಿತ್ತರಿಸಲಾಯಿತು. ನೆರವೇರಿದ ಜನಸಮೂಹದ ಕರತಾಡನದಿಂದ ಸಂಸ್ಥೆಯ 60 ವರ್ಷಗಳ ಸಾರ್ಥಕತೆಯನ್ನು ಪ್ರತಿಬಿಂಬಿಸಲಾಯಿತು. ಕನ್ನಡ ಸಂಘದ ಉಪಾಧ್ಯಕ್ಷೆ ಶ್ರೀಮತಿ ಇಂದಿರಾ ಸಾಲಿಯಾನ್, ಕನ್ನಡ ಸಂಘದ ಕಾರ್ಯದರ್ಶಿ ಶ್ರೀಮತಿ ಮಾಲತಿ ಕಲ್ಮಾಡಿ, ಖಜಾಂಚಿ ರಾಧಿಕಾ ಶರ್ಮ, ಟ್ರಸ್ಟೀ ಬಾಲಜಿತ್ ಶೆಟ್ಟಿ ಮತ್ತು ಮುಖ್ಯಗುರುಗಳಾದ ಶ್ರೀ ಚಂದ್ರಕಾಂತ ಹಾರಕುಡೆ ಮುಂತಾದವರು ಉಪಸ್ಥಿತರಿದ್ದರು.

ಶ್ರೀಮತಿ ಇಂದಿರಾ ಸಾಲಿಯಾನವರು ಪ್ರಾಸ್ತಾವಿಕ ಭಾಷಣವನ್ನು ಮಾಡುತ್ತ “ಈ ಸಂಸ್ಥೆಯನ್ನು ಹಿರಿಯ ವ್ಯಕ್ತಿಗಳಾದ ಡಾಕ್ಟರ್ ಕಲ್ಮಾಡಿ ಶಾಮರಾವ್ ಮತ್ತು ಗುಂಡುರಾಜ್ ಶೆಟ್ಟಿಯಂತಹ ಮೇರು ವ್ಯಕ್ತಿಗಳ ಪ್ರಯತ್ನದ ಫಲವಾಗಿ ಈ ಕನ್ನಡ ಮಾಧ್ಯಮ ಶಾಲೆಯು ಹುಟ್ಟಿಕೊಂಡಿತು. ಕನ್ನಡ ಮಕ್ಕಳಿಗೆ ಬೇಕಾಗುವ ಸೌಲಭ್ಯಗಳನ್ನು ಕನ್ನಡ ಸಂಘವು ಪೂರೈಸುತ್ತ ಬಂದಿದೆ. ಹೊರನಾಡಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ

# ಪುಣೆಯ ಡಾ. ಕಲ್ಮಾಡಿ ಶ್ಯಾಮರಾವ್ ಹೈಸ್ಕೂಲ್ ಕನ್ನಡ ಮಾಧ್ಯಮ ಶಾಲೆಯ ವಜ್ರ ಮಹೋತ್ಸವ ಸಮಾರೋಪದ ಸಮಾರಂಭ





ಕಾರ್ಯವು ಸತತ ಸಾಗಿದೆ. ಪುಣೆಯ ಸಾಹಸಿ ಕನ್ನಡಿಗರಿಂದ 1952ರಲ್ಲಿ ಸ್ಥಾಪನೆಯಾದ ಕನ್ನಡ ಸಂಘವು 1963 ರಲ್ಲಿ ಕನ್ನಡ ಮಾಧ್ಯಮದ ಶಾಲೆ ಪ್ರಾರಂಭಿಸಿ, ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಶಿಸ್ತುಬದ್ಧವಾಗಿ ನಡೆಸಿಕೊಂಡು ಬಂದು ವಜ್ರ ಮಹೋತ್ಸವದ ಸಂಭ್ರಮದಲ್ಲಿರುವುದು ಹೆಮ್ಮೆಯ ವಿಷಯ." ಎಂದು ಹೇಳಿದರು.

ನಂತರ ಸಮಾರಂಭ ಉದ್ದೇಶಿಸಿ ಶಿಕ್ಷಣ ತಜ್ಞ ಡಾ. ಗುರುರಾಜ್ ಕರಜಗಿಯವರು ಶಿಕ್ಷಣದ ಮಹತ್ವ ಬೀರುವ ಉಪನ್ಯಾಸವನ್ನು ನೀಡಿದರು. ಮಕ್ಕಳಿಗೆ ನಾವು ದೇಶಪ್ರೇಮ, ಆತ್ಮವಿಶ್ವಾಸ, ಸಂಸ್ಕಾರಗಳನ್ನು ಕಲಿಸಬೇಕು. ಎಲ್ಲಿ ಸಂಸ್ಕಾರ ಇರುತ್ತದೆಯೋ ಅಲ್ಲಿ ಸಂಸ್ಕೃತಿ ಇರುವುದು. ಮನುಷ್ಯನಿಗೆ ಬುದ್ಧಿವಂತಿಕೆ ಬಹಳ ಮುಖ್ಯ. ಬುದ್ಧಿಗಿಂತ ನಾವು ಹೃದಯದಿಂದ ಕಾರ್ಯ ಮಾಡಿದರೆ ಪರಿಪೂರ್ಣತೆಯನ್ನು ಕಾಣಲು ಸಾಧ್ಯ.


ಅಂತರಂಗ ಬಹಿರಂಗ ಶುದ್ಧಿಯಿಂದ ಮಾಡಿದ ಕಾರ್ಯವು ಪರಿಣಾಮಕಾರಿ ಆಗುವುದು. ಆ ದಿಕ್ಕಿನಲ್ಲಿ ಕನ್ನಡ ಸಂಘದ ಕಾರ್ಯವು ಸಾಗಿದೆ. ಆದುದರಿಂದಲೇ ಈ ಶಾಲೆಯು ವಜ್ರಮಹೋತ್ಸವದ ಸಂಭ್ರಮವನ್ನು ಆಚರಣೆ ಮಾಡುತ್ತಿದೆ. ಈ ಶಾಲೆಯನ್ನು ಕಟ್ಟಿದ ಸಂಸ್ಥಾಪಕರ ಗುರಿಯ ಕಡೆಗೆ ಸಾಗುತ್ತಿರುವುದು ಸಾಧನೆಯ ಹಾದಿಯನ್ನು ತೋರಿಸುತ್ತಿದೆ. ತಂದೆ - ತಾಯಿ, ಗುರುಗಳಿಂದ ಪಡೆದ ಉತ್ತಮ ಸಂಸ್ಕಾರಗಳು ಜೀವನದಲ್ಲಿ ಸರಿಯಾದ ಮಾರ್ಗದಲ್ಲಿ ಕರೆದುಕೊಂಡು ಹೋಗುವವು.


ಒಳ್ಳೆಯ ಸಂಸ್ಕಾರಗಳಿಂದ ಪಡೆದ ಜ್ಞಾನವು, ನಮ್ಮನ್ನು ಎಷ್ಟೇ ಉನ್ನತ ಸ್ಥಾನಕ್ಕೆ ಕೊಂಡೊಯ್ದರು ಸಹ ನಮ್ಮಲ್ಲಿ ನಾನೇ ಮಾಡಿದೆ ಎಂಬ ಅಹಂಕಾರ ಬರಬಾರದು. ಜ್ಞಾನದಲ್ಲಿ ಅಹಂಕಾರಕ್ಕೆ ಸ್ಥಾನವಿರಬಾರದು. ಎಂದು ಶ್ರೀ ಕರಜಗಿ ಅವರು ಹೇಳಿದರು. ನಾವು ನಗು ನಗುತ ಬಾಳಿದರೆ ಸಂತೃಪ್ತ ಜೀವನ ನಮ್ಮದಾಗಬಹುದು. ವಿದ್ಯಾರ್ಥಿಗಳು ಜೀವನದಲ್ಲಿ ಸಾರ್ಥಕತೆಯನ್ನು ಪಡೆಯಬೇಕಾದರೆ, ತಾವು ಪಡೆದ

ಪ್ರಪಂಚ ಜ್ಞಾನದಿಂದಲೇ ಸಾಧ್ಯ. ನಾವು ಎಲ್ಲೇ ಇದ್ದರೂ ಯಾವುದೇ ಪದವಿಯನ್ನು ಪಡೆದರೂ ಕೂಡ ಭವಿಷ್ಯದಲ್ಲಿ ಉತ್ತಮ ನಾಗರಿಕರಾಗಿ ಬಾಳಬೇಕು ಎಂಬ ಪರಿಜ್ಞಾನ ಇರಲಿ ಎಂದರು.

ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಪುಣೆಯ ವಿವಿಧ ಸಂಘ ಸಂಸ್ಥೆಗಳ ಮಕ್ಕಳು, ಪೋಷಕರು ಹಾಗೂ ಪುಣೆಯ ಕನ್ನಡದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು ಶ್ರೀಮತಿ ಶೋಭಾ ಪಂಚಾಂಗಮಠ ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೇಯಾ ಹಬ್ಬು ವಂದನಾರ್ಪಣೆ ಮಾಡಿದರು.










## ಕಲಾವಿದನ ಪರಿಚಯ

ಮುಧೋಳದ ಮಂಜುನಾಥ ಹಿರೇಮಠ, ಹುಟ್ಟು ಕಲಾವಿದ. ಚಿಕ್ಕಂದಿನಿಂದಲೇ ಕಲಾ ಪ್ರತಿಭೆ ಬೆಳಗಿದ ಇವರು, ಕಲಾಕ್ಷೇತ್ರದಲ್ಲಿ ಶಿಕ್ಷಣಗೈದು, ನಂತರ ಮುಧೋಳದಲ್ಲಿ ಕಲಾ ಶಿಕ್ಷಕರಾಗಿಯೂ ಕೆಲಸ ಮಾಡಿದರು. ಇವರ ಅನೇಕ ಕಲಾಕೃತಿಗಳು ರಾಜ್ಯಾಂದ್ಯಂತ ಪ್ರದರ್ಶನಗೊಂಡಿವೆ. ಈ ಸಂಚಿಕೆಯಲ್ಲಿ ಇವರ ಮೂರು ಕಲಾಕೃತಿಗಳನ್ನು ಪ್ರಕಾಶಿಸುತ್ತಿದ್ದೇವೆ.

# ॥ ಬಸವ ಸೇವಾ ಟ್ರಸ್ಟ್ ಪುಣೆ ವತಿಯಿಂದ "ಗುರು ಪೂರ್ಣಿಮಾ" ಕಾರ್ಯಕ್ರಮ ಆಚರಣೆ ॥



ಗುರು ಪೂರ್ಣಿಮಾ ದಿನದಂದು ಬಸವ ಸೇವಾ ಟ್ರಸ್ಟ್ ಶಿವಯೋಗಿ ಭವನ ಭಗತ್ ವಸ್ತಿ ಭೋಸರಿ ಪುಣೆಯಲ್ಲಿ ಗುರುಪೂರ್ಣಿಮಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪೂಜ್ಯಶ್ರೀ ಗಣೇಶಾನಂದ ಮಹಾರಾಜರು ಗುರುದೇವಶ್ರಮ ಬೀದರ, ಶ್ರೀ ರಘುರಾಮ್ ಭಟ್ಟರು ಮತ್ತು ಬಸವ ಟ್ರಸ್ಟ್ ಪದಾಧಿಕಾರಿಗಳು ಶ್ರೀ ಬಸವೇಶ್ವರ ಮತ್ತು ಶ್ರೀ ಜ್ಞಾನಯೋಗಿ ಸಿದ್ದೇಶ್ವರ ಗುರೂಜಿ ಅವರ ಪ್ರತಿಮೆಗೆ ಪುಷ್ಪಾಂಜಲಿ ಅರ್ಪಿಸಿ ದೀಪ ಪ್ರಜ್ವಲದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀ ಶಿವನಗೌಡ ನಂದೆಪ್ಪಗೌಡರು ಬಸವ ಸೇವಾ ಟ್ರಸ್ಟ್ ವತಿಯಿಂದ ಎಲ್ಲರನ್ನೂ ಸ್ವಾಗತಿಸಿದರು. ನಂತರ ಶ್ರೀ ಅಮರನಾಥ ಮಾನಾ & ಕುಮಾರಿ ಜಾನ್ವವಿ ಮಾನಾರವರು 'ಗುರು ಮೇರಿ ಪೂಜಾ ಗುರು ಗೋವಿಂದ 'ಭಕ್ತಿ ಗೀತೆ ಹಾಡಿ ಜನರನ್ನು ಭಾವುಕ ಮಾಡಿದರು. ಬಸವ ಟ್ರಸ್ಟ್ ವತಿಯಿಂದ ಉಪಸ್ಥಿತ ಗಣೇಶಾನಂದ ಮಹಾರಾಜರನ್ನು ಮತ್ತು ಶ್ರೀ ರಘುರಾಮ್ ಭಟ್ಟರನ್ನು ಸತ್ಕರಿಸಲಾಯಿತು. ಬಸವ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಶಿವಲಿಂಗ ಧವಳೇಶ್ವರವರು ಬಸವ ಸೇವಾ ಟ್ರಸ್ಟ್ ಅಡಿಯಲ್ಲಿ "ಜ್ಞಾನ ಪ್ರಕಾಶ"ಸಿದ್ಧ ಸಾಧನಾ ಉಚಿತ ಅಧ್ಯಯನ ಮತ್ತು ಸಮಾಲೋಚನೆ ಕೇಂದ್ರದ ರೂಪರೇಷೆಗಳನ್ನು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಎಲ್ಲರ ಜೊತೆ ಹಂಚಿಕೊಂಡರು. ಶ್ರೀ ಬಸವರಾಜ ಪಟ್ಟಣಶೆಟ್ಟಿ ಮತ್ತು ಶ್ರೀ ಶಿವಪ್ಪಣ್ಣ ತಾಳಿಕೋಟಿ ವೇದಿಕೆ ಮೇಲೆ ಉಪಸ್ಥಿತ ಪೂಜ್ಯರ ಮತ್ತು ಹಿರಿಯರ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು. ಚಾತುರ್ಮಾಸದಲ್ಲಿ ಬರುವ ಈ ಗುರುಪೂರ್ಣಿಮೆಯೆಂದು ಶ್ರೇಷ್ಠ ಹಿಂದೂ ಗುರುಗಳಾದ ವೇದ ಮಹರ್ಷಿಗಳ ಜನ್ಮದಿನದ ಅಂಗವಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ಗುರು ಅಂದರೆ ಅಂಧಕಾರ ಅಥವಾ ಅಜ್ಞಾನವನ್ನು ದೂರ ಮಾಡುವವರು. ಗುರುಪೂರ್ಣಿಮೆಗೆ ಧಾರ್ಮಿಕ ಪ್ರಾಮುಖ್ಯತೆ ಅಲ್ಲದೆ ಶೈಕ್ಷಣಿಕ ಮತ್ತು ವಿದ್ವಾಂಸರ ವೃಂದದಲ್ಲಿ ಮಹತ್ವವಿದೆ ಎಂದು ಉಪಸ್ಥಿತ ಹಿರಿಯರಾದ ಶ್ರೀರಘುರಾಮ ಭಟ್ಟರು ತಿಳಿಸಿದರು. ಈ ಪ್ರಪಂಚದಲ್ಲಿ ಗುರುವಿನಕ್ಕಿಂತ ಹೆಚ್ಚು ಯಾರು ದೊಡ್ಡವರಿಲ್ಲ ಮತ್ತು ಗುರುವಿನಿಂದ ಧರ್ಮ ಶುದ್ದಿ, ಗುರುವಿನಿಂದ ಮನಸ್ಸು ಶುದ್ದಿ, ಗುರುವಿನಿಂದ ಭಾವ ಶುದ್ದಿ ಎಂದು ನೆರೆದಿದ್ದ ಭಕ್ತಾದಿಗಳಿಗೆ ತಿಳಿಸಿದರು. ಕಬೀರ, ತುಕಾರಾಮ, ಬಸವಣ್ಣನವರ ವಚನಗಳು, ಶಿವಯೋಗಿಗಳ ಗುರುವಿನ ಬಗ್ಗೆ ಹೇಳಿದ ಮತ್ತು ಪಾಲಿಸಿದ ಹಿರಿಮೆಯನ್ನು ವರ್ಣಿಸಿದರು. ಗುರುವಿನ ಮಹತ್ವದ ಜ್ಞಾನವನ್ನು ಶ್ರೀ ಗಣೇಶಾನಂದ ಮಹಾರಾಜರು ಉಣಬಡಿಸಿದರು.

ಶ್ರೀ ಗಂಗಾಧರ ಬೆಣ್ಣೂರು ಮತ್ತು ಶ್ರೀ ಮಾಲತೇಶ ಕುಲಕರ್ಣಿ ಮತ್ತು ಕಸಂಪು ತಂಡ ತಮ್ಮ ಮಧುರ ಕಂಠದಿಂದ ಭಕ್ತಿಗೀತೆಗಳ ಸುರಿಮಳೆಯಿಂದ ಕಾರ್ಯಕ್ರಮಕ್ಕೆ ಶೋಭೆ ತಂದುಕೊಟ್ಟರು. ಕಸಂಪು ತಂಡದ ಎಲ್ಲ ಕಲಾಕಾರನ್ನು ಬಸವ ಸೇವಾ ಟ್ರಸ್ಟ್ ಅಭಿನಂದಿಸಿ, ಸತ್ಕರಿಸಿದರು. ಬಸವ ಸೇವಾ ಟ್ರಸ್ಟ್ ದ ಪ್ರಧಾನ ಕಾರ್ಯ ದರ್ಶಿಗಳಾದ ಶ್ರೀ ಚಂದ್ರಶೇಖರ ಗಾಣಿಗೇರವರ ನಿರೂಪಣೆ ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾಗಿತ್ತು. ಕೊನೆಯಲ್ಲಿ ಶ್ರೀ ಅಮರನಾಥ ಮಾನಾ ವಂದನಾರ್ಪಣೆ ನಡೆಸಿಕೊಟ್ಟರು. ಎಲ್ಲರೂ ಶ್ರೀ ಸಿದ್ದೇಶ್ವರ ಸ್ವಾಮೀಜಿ ಮತ್ತು ಬಸವಣ್ಣರ ಪ್ರತಿಮೆಗೆ ಪುಷ್ಪಾಂಜಲಿ ಅರ್ಪಿಸಿ ಮಹಾಪ್ರಸಾದ ತೆಗೆದುಕೊಂಡರು. ಸುಮಾರು ೧೨೦ ರಷ್ಟು ಭಕ್ತಾದಿಗಳು ಬಂದು ಗುರು ಪೂರ್ಣಮಾ ಕಾರ್ಯಕ್ರಮ ಯಶಸ್ವಿಗೊಳಿಸಿದರು.



# ಮೊಗ್ಗೆಯ ಕಂಪು

## ಯುವ ಪ್ರತಿಭೆ- ಸುರಭಿ ಅಣ್ಣಿಗೇರಿ

ಅಭ್ಯಾಸದೊಂದಿಗೆ ವಿವಿಧ ಹವ್ಯಾಸಗಳನ್ನು ಬೆಳೆಸಿಕೊಂಡು ಸಾಧಿಸುವಲ್ಲಿ ಸೌಮ್ಯ ಸ್ವಭಾವ, ಮಿತಭಾಷಿ, ಸುರಭಿಯದು ಎತ್ತಿದ ಕೈ. ಅನೇಕ ಶಾಲಾ-ಕಾಲೇಜುಗಳಲ್ಲಿ, ಬೇರೆ-ಬೇರೆ ಸಂಸ್ಕೃತಿಯಲ್ಲಿ ಬೆಳೆದ ಇವಳು ಚಿಕ್ಕಂದಿನಲ್ಲಿಯೇ ವೈವಿಧ್ಯ ಅನುಭವ ಹೊಂದಿದವಳು. ಧಾರವಾಡದಲ್ಲಿ ಹುಟ್ಟಿ, ಪುಣೆಯಲ್ಲಿ ಚಿಕ್ಕಂದಿನ ಬಾಲ್ಯ ಕಳೆದ ಈಕೆ, ಪ್ರಾಥಮಿಕ, ಮಾಧ್ಯಮಿಕ ಶಾಲೆ ಓದಿದ್ದು ಫ್ರಾನ್ಸನ ಸಾಂಸ್ಕೃತಿಕ ನಗರ Aix-en-Provence ನಲ್ಲಿ. ಕನ್ನಡ, ಇಂಗ್ಲಿಷ್, ಹಿಂದಿಯಷ್ಟೇ ಸರಾಗವಾಗಿ ಇವಳು ಫ್ರೆಂಚ್ ಕೂಡ ಮಾತಾಡಬಲ್ಲಳು. ಮರಾಠಿ ಸೇರಿದಂತೆ ಐದು ಭಾಷೆಗಳಲ್ಲಿ ವ್ಯವಹರಿಸಬಲ್ಲಳು ಎಂಬ ಹೆಮ್ಮೆ ಇವಳದು.

ತಾಯಿಯಿಂದ ಸಂಗೀತ ಪರಂಪರೆ ಪಡೆದ ಸುರಭಿ, ಸುಮಧುರ ಪಾಶ್ಚಾತ್ಯ ಸಂಗೀತ ಗಾಯಕಿ. ಆಂಗ್ಲ, ಫ್ರೆಂಚ್ ಹಾಗು ಹಿಂದಿಯಲ್ಲಿನ ಅನೇಕ ಹಾಡುಗಳಿಗೆ ಧ್ವನಿ ನೀಡಿದ್ದಾಳೆ. TEDx ಸೇರಿದಂತೆ ಹಲವು ವೇದಿಕೆ ಮೇಲೆ ಗಾನ ಪ್ರದರ್ಶನ ಮಾಡಿದ ಇವಳು 'ಮೆಹಫಿಲ್' ಮತ್ತು ಇತರ ಕೆಲ online concert ಗಳಲ್ಲೂ ಹಾಡಿದ್ದಾಳೆ. ಬೆಲ್ಜಿಯಮ್ ಸಂಗೀತಗಾರ ತಂಡಕ್ಕೂ ತನ್ನ ಧ್ವನಿ ಕೊಟ್ಟಿದ್ದಾಳೆ, ಆಂಗ್ಲ ಮತ್ತು ಫ್ರೆಂಚ್ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಹೊಂದಿದ ಸುರಭಿ ಬರೆದ ಹಾಡುಗಳನ್ನು ಆಂಗ್ಲ ಸಂಗೀತಗಾರ ತಂಡ ತಮ್ಮ ಸಂಗೀತ ಸಂಯೋಜನೆಗೆ ಉಪಯೋಗಿಸಿಕೊಂಡಿದೆ. ಯುಕಲೆಲೆ ಬಾರಿಸುತ್ತ ಹಾಡುವುದರಲ್ಲಿ ಪ್ರವೀಣಳಾದ ಈ ಹುಡುಗಿ, ಈಗ ಗಿಟಾರ್ ನುಡಿಸುವದನ್ನೂ ಕರಗತ ಮಾಡಿಕೊಳ್ಳುತ್ತಿದ್ದಾಳೆ.



ಕಂಪ್ಯೂಟರ್ ಇಂಜಿನಿಯರಿಂಗನಲ್ಲಿ ಪದವಿ ವ್ಯಾಸಂಗ ಈಗತಾನೆ ಮುಗಿಸಿದ ಸುರಭಿ ತಾಂತ್ರಿಕ ಕ್ಷೇತ್ರದಲ್ಲಿ ತನ್ನ ವೃತ್ತಿ ಜೀವನ ಪ್ರಾರಂಭಿಸಲಿದ್ದಾಳೆ. ಇವಳ ಉಜ್ವಲ ಭವಿಷ್ಯಕ್ಕೆ ಹಾರೈಸುತ್ತ, ಸುರಭಿಯ ಎಲ್ಲಾ ಅಭಿಲಾಷೆಗಳು ಈಡೇರಲಿ ಎನ್ನುತ್ತಿದೆ ಕಂಪು ಪತ್ರಿಕಾ ತಂಡ.

# ವ್ಯಾಪಾರ ಮಳಿಗೆ



ದೂರವೇನಿಲ್ಲ ಗೂಡು, ಸೇರುವ ದಾರಿ
ದಾಟಿಬಿಟ್ಟರಾಯ್ತು ಹರಿವ ತೊರೆಯ
ನಡೆಯಲಳವೇನು ನೀರಿಗಿಳಿದು
ಅರಿವಿರದ ಸೆಳವಿನಾಳ ಅಳೆಯಲಾಗದು
ಪರಿಸರದ ಗಂಧಗಾಳಿಗೆ ಮನಸೋತು
ಮೈಮರೆಯಿತೇ ಹಸಿರು ಚಲುವಿಗೆ ಆತು

ಇರುವುದೇನೋ ಸರಿಯೆ ಒಂಟಿ ದೋಣಿ
ಕಾಲುವೆಯ ಅಂಚಿನಲಿ ಸ್ಥಬ್ದ ಚಿತ್ರದಂತೆ
ಪಯಣಿಕರಿಗೆ ಕಾದಿರುವ ಕಾತುರದಂತೆ
ಅಂಬಿಗನ ಅರಸಿ ಹೋದವರಂತೆ
ಬಂದಾನೋ ಬಾರನೋ ಸಂದೇಹದಂತೆ
ಪಾರುಗಾಣಿಸು ಎಂದು ಹರಿಯ ಕರೆದಂತೆ

ಕಾರ್ಮೋಡ ದಟ್ಟೈಸಿ ಇಳಿಯುತಿದೆ ಆಗಸದಿ
ಜಲಧಿ ಕಿರಿದಾದರು ಬೆದರಿಕೆಯು ಹಿರಿದು
ಅನುದಿನದ ಪಯಣವಿದು ದಡದಿಂದ ದಡಕೆ
ಒಡಲೂಟದ ಮಾಯೆ ಬಯಲು ಆಲಯಕೆ
ನಡುವೆ ಕೆಲವೇ ಕೆಲವು ಒಡನಾಟದ ಗಳಿಗೆ
ಸುತ್ತಿ ಸುಳಿಯುವ ಬಾಳ ವ್ಯಾಪಾರ ಮಳಿಗೆ

- *ಅನಸೂಯಾ ಸಿದ್ದರಾಮ*

## ಕವಿ ಪರಿಚಯ

**ಕಂಪು ಪತ್ರಿಕೆಯ ಓದುಗರಿಗೆ ಮತು ಕಂಪು ಬಳಗಕ್ಕೆ ಅನುಸೂಯಾ ಅವರ ಪರಿಚಯ ಬೇಕಾಗಿಲ್ಲ. ಗ್ರಾಮ್ಯ ಸೊಗಡಿನ ಶಬ್ದಗಳ ಬಳಕೆಯಿಂದ ಮನ ತಟ್ಟುವ ಕವನ ಬರೆಯುವವದರಲ್ಲಿ ಅವರು ನಿಸ್ಸೀಮರು. ಸಾಧನೆಯ ಉತ್ತುಂಗದಲ್ಲಿದ್ದರೂ ನೆಲಕ್ಕಂಟಿದ ಬರಹ ಅವರದು.**

# ಮುಂದಿನ ಸಂಚಿಕೆಯಲ್ಲಿ............

ಕಂಪುವಿನ ನಾಲ್ಕನೆಯ ಸಂಚಿಕೆಯೂ ನಿಗದಿತ ಸಮಯದಲ್ಲಿ ತಮ್ಮ ಕೈ ತಲುಪಿದೆ. ಬಿಡಿವಿಲ್ಲದ ದಿನಚರಿಯ ನಡುವೆಯೂ ಈ ಸಂಚಿಕೆ ತನ್ನ ರೂಪರೇಷೆಗಳೊಂದಿಗೆ ಹೊರ ಬಂದಿರುವದಕ್ಕೆ ಸ್ವಯಂ ಸ್ಪೂರ್ತಿಯಿಂದ ಸಹಾಯ ಮಾಡಿದ ಎಲ್ಲರಿಗೂ ಧನ್ಯವಾದಗಳು.

ಸ್ವಾತಂತ್ರ್ಯ ಸೇನಾನಿಗಳ ವ್ಯಕ್ತಿ ಚಿತ್ರಣವನ್ನು ವಿಷಯವಾಗಿರಿಸಿಕೊಂಡು ಈ ಸಂಚಿಕೆ ಮೂಡಿಸಿದ್ದೇವೆ. ಮುಖ್ಯ ವಿಷಯದೊಂದಿಗೆ ಸಂಚಿಕೆ ತಂದಿರುವದು ನಮಗೆ ಹೊಸ ಪ್ರಯೋಗ. ಇದರ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ. ಹಬ್ಬಗಳ ಮಾಸದಲ್ಲಿ ಮರೆಯಾಗುತ್ತಿರುವ ಹಬ್ಬದಾಚರಣೆಗಳನ್ನು ತರುವ ಬಯಕೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು.

ಮಹಿಳಾ ಉದ್ಯಮಿಗಳ ಉಚಿತ ಜಾಹೀರಾತು ನೀಡುವ ಬಗ್ಗೆ ತಿಳಿಸಿದ್ದೆವು. ಈ ಸಂಚಿಕೆಯಲ್ಲಿ ಅದರ ಆರಂಭವಾಗಿರುವದು ಸಂತಸದ ಸಂಗತಿ. ಇನ್ನೂ ಹೆಚ್ಚಿನ ಮಹಿಳೆಯರು ಮುಂದೆ ಬರಲಿ. ಪುಣೆಯಲ್ಲಿನ ಆಗು ಹೋಗುಗಳ ಹೊರತಾಗಿ ಪುಣೆ ಮತ್ತು ಪುಣೆಯೇತರ ನಮ್ಮ ಬಳಗದ ಜನರ ಸಾಧನೆಗಳನ್ನು ಹಂಚಿಕೊಳ್ಳುವ ಅಂಕಣ ಪ್ರಾರಂಭಿಸಲಿದ್ದೇವೆ. ನಮ್ಮವರಿಗೆ ಸಿಕ್ಕ ಪ್ರಶಸ್ತಿ, ಸನ್ಮಾನಗಳ ವಿವರ ನಮಗೆ ಕಳಿಸಿ. ಸಂತಸ ಪಡುವ ಜನರಲ್ಲಿ ಈ ಸುದ್ದಿಗಳನ್ನು ಹಂಚಿಕೊಳ್ಳುವದು ಒಳ್ಳೆಯದಲ್ಲವೇ.

ಕಂಪಿನ ವ್ಯಾಪ್ತಿ ಹರಡಲು ನಿಮ್ಮ ಸಹಕಾರ ಬೇಕು. ನಿಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ, WhatsApp Status (Updates) ನಲ್ಲಿ ಇದನ್ನು ಬಿತ್ತರಿಸಿ. ಹೆಚ್ಚಿನ ಜನರಿಗೆ ಇದನ್ನು ತಲುಪಿಸಲು ನಮ್ಮ ಮನವಿ. ಮಳೆಯಿಂದ ತಂಪಾದ ವಾತಾವರಣದಲ್ಲಿ ಕಂಪಿನ ಸುಗಂಧವೂ ಹರಡಲಿ.

# ತಿಂಗಳ ಛಾಯಾ ಫಲಕ





















